**ಸರ್ವೋಚ್ಚ ನ್ಯಾಯಾಲಯ**

**ಸನ್ಮಾನ್ಯ ನ್ಯಾಯಮೂರ್ತಿ ಎಲ್. ನಾಗೇಶ್ವರರಾವ್**

**ಮತ್ತು**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀಯುತ ಎಂ.ಆರ್. ಷಾ**

ವಿಜಯ ಮೋಹನ ಸಿಂಗ್ –ವಿರುದ್ಧ– ಕರ್ನಾಟಕ ಸರ್ಕಾರ

**ಕ್ರಿಮಿನಲ್ ಅಪೀಲು ಸಂಖ್ಯೆ: 1656/2013 ದಿನಾಂಕ: ಏಪ್ರಿಲ್ 10, 2019.**

**ತೀರ್ಪು**

**ಸನ್ಮಾನ್ಯ ನ್ಯಾಯಮೂರ್ತಿ ಎಂ.ಆರ್. ಷಾ:**

ಕರ್ನಾಟಕ ಉಚ್ಚ ನ್ಯಾಯಾಲಯ, ಗುಲ್ಬರ್ಗಾದ ಸಂಚಾರಿ ಪೀಠವು, ಕರ್ನಾಟಕ ಸರ್ಕಾರ ಸಲ್ಲಿಸಿರುವ ಕ್ರಿಮಿನಲ್ ಅಪೀಲು ಸಂಖ್ಯೆ 02/2008ನ್ನು ಅಂಗೀಕರಿಸಿ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302, 34ನೇ ಪ್ರಕರಣದೊಂದಿಗೆ ಓದಲಾದ 498ಎ, 304–ಬಿ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 3, 4 ಹಾಗೂ 6ನೇ ಪ್ರಕರಣಗಳಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಮೂಲ ಆಪಾದಿತ ಸಂಖ್ಯೆ:1 (ಇಲ್ಲಿನ ಅಪೀಲುದಾರ)ನ್ನು ಖುಲಾಸೆ ಮಾಡಿ, ಮಾನ್ಯ ಅಧ್ಯಕ್ಷಾಧಿಕಾರಿ, ತ್ವರಿತಗತಿಯ ನ್ಯಾಯಾಲಯ IV– ಬೀದರ್ (ಇನ್ನು ಮುಂದೆ ಅಧಿವಿಚಾರಣಾ ನ್ಯಾಯಾಲಯ ಎಂದು ಉಲ್ಲೇಖಿಸಲಾಗಿದೆ), ಈ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ದಿನಾಂಕ: 20.12.2007ರಂದಿನ ಖುಲಾಸೆಯ ತೀರ್ಪು ಹಾಗೂ

ಆದೇಶವನ್ನು ವಜಾಗೊಳಿಸಿ ಹಾಗೂ ರದ್ದುಮಾಡಿ, ತದನುಸಾರವಾಗಿ, ಭಾರತ ದಂಡ ಸಂಹಿತೆಯ 302ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಮೂಲ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿ, ಇಲ್ಲಿನ ಭಾರತ ದಂಡ ಸಂಹಿತೆಯ 498–ಎ ಪ್ರಕರಣ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 4ನೇ ಪ್ರಕರಣದಡಿಯಲ್ಲಿ, ಇಲ್ಲಿನ ಅಪೀಲುದಾರ ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ ಅಪರಾಧ ನಿರ್ಣೀತನನ್ನಾಗಿಸಿ ದಿನಾಂಕ: 8.2.2013ರಂದು ಹೊರಡಿಸಿದ ಪ್ರಶ್ನಿತ ತೀರ್ಪು ಹಾಗೂ ಆದೇಶದಿಂದ ಬಾಧಿತನೂ, ಅಸಂತುಷ್ಟನೂ ಆಗಿರುವ ಮೂಲ ಆಪಾದಿತ ಸಂಖ್ಯೆ:1 ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾನೆ.

2. ಪ್ರಾಸಿಕ್ಯೂಷನ್ ಮೊಕದ್ದಮೆಯು ಸಂಕ್ಷಿಪ್ತವಾಗಿ ಈ ಮುಂದಿನಂತಿರುತ್ತದೆ:

ಅಪೀಲುದಾರನ ವಿವಾಹವು ಬೀದರನ ಗುರುದ್ವಾರ ಮಂದಿರದಲ್ಲಿ ದಿನಾಂಕ: 11.12.2002ರಂದು ಮೃತ ಅಭಿಲಾಷಾಗಳೊಂದಿಗೆ ನಡೆದಿರುತ್ತದೆ. ವಿವಾಹ ಪೂರ್ವದಲ್ಲಿ, ಆಪಾದಿತ ಎ1 ರಿಂದ ಎ3, ಮೃತಳ ತಂದೆ–ತಾಯಿಯರಿಂದ 50,000ರೂ.ಗಳು ಹಾಗೂ ಐದು ತೊಲ ಬಂಗಾರವನ್ನು ವರದಕ್ಷಿಣೆಯ ರೂಪದಲ್ಲಿ ಕೇಳಿದ್ದು, ಅಂತಿಮವಾಗಿ 6 ತೊಲ ಬಂಗಾರ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಕೊಡಲಾಗುತ್ತದೆಂಬ ತೀರ್ಮಾನದೊಂದಿಗೆ, ವಿವಾಹವನ್ನು ನಡೆಸಲಾಗಿರುತ್ತದೆಂದು ಹೇಳಲಾಗಿರುತ್ತದೆ. ಅಲ್ಲದೆ, ವಿವಾಹವಾದ ಆರು ತಿಂಗಳುಗಳ ತರುವಾಯ, ಎಲ್ಲಾ ಆಪಾದಿತರು ಮೂಲ ಆಪಾದಿತ ಸಂಖ್ಯೆ:1 ಎಲೆಕ್ಟ್ರಿಕ್ ಅಂಗಡಿ ನಡೆಸುವುದಕ್ಕೆ ಸಂಬಂಧಿಸಿದಂತೆ ಬಂಡವಾಳ ಹೂಡಲು

50,000/–ರೂ.ಗಳ ಹೆಚ್ಚುವರಿ ವರದಕ್ಷಿಣೆ ತರುವಂತೆ ಪೀಡಿಸಿರುತ್ತಾರೆ. ಹಾಗೆ ಪೀಡಿಸುವ ಮೂಲಕ, ಎ1 ರಿಂದ ಎ3ರವರುಗಳು ಹಾಗೆ ಮಾಡದಿರುವಂತೆ ಪ್ರಾ.ಸಾ.1, 2, 6 ಹಾಗೂ 14ರವರುಗಳು ನೀಡಿದ ಸಲಹೆಯನ್ನು ತಿರಸ್ಕರಿಸಿ, ಮೃತಳಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಎರಡೂ ರೀತಿಯಲ್ಲೂ ಕ್ರೂರವಾಗಿ ಹಿಂಸಿಸುವುದನ್ನು ಮುಂದುವರೆಸಿದ್ದು, ದಿನಾಂಕ 13.2.2005ರಂದು ಮಧ್ಯಾಹ್ನ 3.15ಕ್ಕೆ 50,000/– ರೂ.ಗಳ ಮೊಬಲಗನ್ನು ಹೇಗೆ ತರಲಿಲ್ಲವೆಂದು ಜಗಳ ಆರಂಭಿಸಿದರೆಂದೂ ಹೇಳಲಾಗಿರುತ್ತದೆ. ಮುಂದುವರೆದು ನೆರೆಹೊರೆಯವರು ಮಧ್ಯೆ ಪ್ರವೇಶಿಸಿ ಮೃತಳು ಹಾಗೂ ಆಪಾದಿತನನ್ನು ಜಗಳ ಬಿಡಿಸಿ ಬೇರೆ ಬೇರೆ ಮಾಡಿರುತ್ತಾರೆ. ತರುವಾಯ ಸುಮಾರು ಸಂಜೆ 5.00ಗಂಟೆಗೆ ಆಕೆ ತನ್ನ ತಂದೆ–ತಾಯಿಯರಿಗೆ ದೂರವಾಣಿ ಕರೆ ಮಾಡಿರುತ್ತಾಳೆಂದೂ ವಾದಿಸಲಾಗಿರುತ್ತದೆ. ಮುಂದುವರೆದು ಆ ಸಮಯದಲ್ಲಿ ಎ1 (ಇಲ್ಲಿನ ಆಪಾದಿತ) ಮೃತಳನ್ನು ಹೇಗೆ ಹಾಗೂ ಏಕೆ ಆಕೆಯ ತಂದೆ–ತಾಯಿಯರಿಗೆ ದೂರವಾಣಿ ಕರೆ ಮಾಡಿದಳೆಂದು ಜಗಳ ಮಾಡುತ್ತಲೇ, ಆಕೆಯನ್ನು ಕೊಲ್ಲಲು ಮುಂದಾಗಿ ತರುವಾಯ ಎ1 (ಇಲ್ಲಿನ ಅಪೀಲುದಾರ) ಮೃತಳ ಮೇಲೆ ಸೀಮೆಎಣ್ಣೆ ಸುರಿದು, ಬೆಂಕಿ ಹಚ್ಚಿ ಸ್ಥಳದಿಂದ ಓಡಿಹೋಗಿರುತ್ತಾನೆಂದು ಹೇಳಿರುತ್ತಾಳೆ. ಮೃತಳಿಗೆ ಗಂಭೀರ ಸ್ವರೂಪದ ಗಾಯಗಳುಂಟಾಗಿ ನೆರೆ ಹೊರೆಯವರೇ ಬೀದರ್‌ನಲ್ಲಿನ ಸರ್ಕಾರಿ ಆಸ್ಪತ್ರೆಗೆ, ತರುವಾಯ ಹೈದರಾಬಾದಿನಲ್ಲಿನ ಉಸ್ಮಾನಿಯಾ ಆಸ್ಪತ್ರೆಗೂ ಕರೆದೊಯ್ದರಾದರೂ, ಮೃತಳು ದಿನಾಂಕ: 17.02.2005ರಂದು ಸಂಜೆ 5.45ಕ್ಕೆ ಕೊನೆಯುಸಿರೆಳೆದಿರುತ್ತಾಳೆಂದೂ ಹೇಳಲಾಗಿರುತ್ತದೆ.

2.1 ಮೃತಳ ತಂದೆ ಇಲ್ಲಿನ ಅಪೀಲುದಾರ ಮೂಲ ಆಪಾದಿತ ಸಂಖ್ಯೆ.1 ಹಾಗೂ ಆಪಾದಿತ ಸಂಖ್ಯೆ.1ರ ಕುಟುಂಬದ ಇತರೆ ನಾಲ್ವರ ವಿರುದ್ಧ ಪ್ರಥಮ ಮಾಹಿತಿ ವರದಿ ಅಪರಾಧ ಸಂಖ್ಯೆ:31/2005 ಎಂದು ನೋಂದಾಯಿಸಿರುವಂಥ ಪ್ರಥಮ ಮಾಹಿತಿ ವರದಿಯನ್ನು ಆರಂಭಿಕವಾಗಿ, ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 498ಎ, 307ನೇ ಪ್ರಕರಣಗಳ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 4ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ದಾಖಲಿಸಲಾಗಿರುತ್ತದೆ. ಆ ತರುವಾಯ, ಬಾಧಕಕ್ಕೊಳಗಾದ ಈಕೆ ತೀವ್ರ ಸ್ವರೂಪದ ಗಾಯಗಳಿಗೆ ತುತ್ತಾಗಿ ಆಸ್ಪತ್ರೆಯಲ್ಲಿ ಮೃತಳಾಗಿದ್ದುದರಿಂದ ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302ನೇ ಪ್ರಕರಣ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 304–ಬಿ ಪ್ರಕರಣ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮದ 3, 4 ಹಾಗೂ 6ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳನ್ನು ಸೇರಿಸಲಾಗಿರುತ್ತದೆ. ತನಿಖೆಯ ಸಮಯದಲ್ಲಿ, ಪರಿಶೀಲನಾಧಿಕಾರಿಗಳು ಸಂಬಂಧಪಟ್ಟ ಸಾಕ್ಷ್ಯಗಳ ಅಂದರೆ ಬಾಧಕಕ್ಕೊಳಗಾದವಳ ತಂದೆ–ತಾಯಿ, ಆಪಾದಿತರ ಮನೆಯ ನೆರೆಹೊರೆಯವರುಗಳ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಅಲ್ಲದೆ ವೈದ್ಯಕೀಯ ಸಾಕ್ಷ್ಯವನ್ನು ಸಹಾ ಸಂಗ್ರಹಿಸಿರುತ್ತಾರೆ. ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಬಲಿಪಶುವಿನ ಮರಣ ಕಾಲೀನ ಹೇಳಿಕೆಯನ್ನು ದಾಖಲಿಸಿರುತ್ತಾರೆ. ತನಿಖೆಯು ಪೂರ್ಣಗೊಂಡ ತರುವಾಯ ಹಾಗೂ ಮೇಲ್ನೋಟಕ್ಕೆ ಸಮ್ಮತವಾದ ವಾದದ ತರುವಾಯ ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 498ಎ, 304–ಬಿ, 302ನೇ ಹಾಗೂ

ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 3,4 ಹಾಗೂ 6ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಎಲ್ಲಾ ಆಪಾದಿತರ ವಿರುದ್ಧ ಪೊಲೀಸರು ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣವನ್ನು ವಿಶೇಷವಾಗಿ ಸೆಷನ್ಸ್ ನ್ಯಾಯಾಲಯಗಳು ಅಧಿವಿಚಾರಿಸಬೇಕಾಗಿರುವುದರಿಂದ, ಮಾನ್ಯ ಮ್ಯಾಜಿಸ್ಟ್ರೇಟರು ಸೆಷನ್ಸ್ ಅಪರಾಧ ಸಂಖ್ಯೆ.83/2005 ಎಂದು ನೋಂದಾಯಿಸಿರುವಂಥ ಸದರಿ ಪ್ರಕರಣವನ್ನು ಮಾನ್ಯ ಪ್ರಧಾನ ಸೆಷನ್ಸ್ ನ್ಯಾಯಾಧೀಶರು, ಬೀದರ್ ಇವರಿಗೆ ಒಪ್ಪಿಸಿರುತ್ತಾರೆ. ಆಪಾದಿತನು ತಾನು ಅಪರಾಧಿಯಲ್ಲವೆಂದು ವಾದಿಸುತ್ತಿರುವುದರಿಂದ, ಅವರೆಲ್ಲರನ್ನೂ ಮೇಲೆ ಹೇಳಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ಅಧಿವಿಚಾರಿಸಬೇಕಾಗಿರುತ್ತದೆ.

2.2 ಆಪಾದಿತನ ವಿರುದ್ಧ ಪ್ರಕರಣವನ್ನು ರುಜುವಾತುಪಡಿಸಲು, ಪ್ರಾಸಿಕ್ಯೂಷನ್ 28ಕ್ಕಿಂತ ಹೆಚ್ಚಿನ ಸಾಕ್ಷ್ಯಗಳ ವಿಚಾರಣೆ ನಡೆಸಿರುತ್ತದೆ. ಮೇಲೆ ಹೇಳಿದ ಸಾಕ್ಷ್ಯಗಳ ಮೂಲಕ ಪ್ರಾಸಿಕ್ಯೂಷನ್ ದುರಂತಕ್ಕೊಳಗಾದ ಬಲಿಪಶುವಿನ ಮರಣ ಕಾಲೀನ ಹೇಳಿಕೆಯನ್ನು ಒಳಗೊಂಡಂತೆ ಸೂಕ್ತ ದಸ್ತಾವೇಜೀಯ ಸಾಕ್ಷ್ಯವನ್ನು ದಾಖಲಿಸಿರುತ್ತದೆ. ಆ ತರುವಾಯ, ಪ್ರತಿವಾದಿಗಳು, ಸಾಕ್ಷ್ಯವನ್ನು ಪಡೆಯಲು ಮೃತಳ ಅಪ್ರಾಪ್ತ ಮಗನನ್ನು ಒಳಗೊಂಡಂತೆ ಪ್ರ.ಸಾ.1 ಹಾಗೂ ಪ್ರ.ಸಾ.2 ಎಂಬ ಎರಡೂ ಸಾಕ್ಷ್ಯಗಳ ವಿಚಾರಣೆ ನಡೆಸಿರುತ್ತಾರೆ. ಮುಂದುವರೆದು ಆಪಾದಿತರ ಹೇಳಿಕೆಯನ್ನು ಆಪಾದಿತ ವ್ಯಕ್ತಿಗಳ ವಿರುದ್ಧ ಅಪರಾಧದಲ್ಲಿ ಸಿಕ್ಕಿಸುವಂಥ ಸಂದರ್ಭಗಳನ್ನು ಪ್ರಸ್ತಾಪಿಸಿ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಿಸಲಾಗಿರುತ್ತದೆ. ಆಪಾದಿತರ ಈ ವಾದವನ್ನು ಸಂಪೂರ್ಣವಾಗಿ ನಿರಾಕರಿಸಲಾಗಿರುತ್ತದೆ. ಸಾಕ್ಷ್ಯ ಗುಣಾವಗುಣಗಳನ್ನು ವಿವೇಚಿಸಿ, ದಾಖಲೆ ಮೇಲಿನ ವಸ್ತು

ವಿಷಯವನ್ನು ಪರಿಗಣಿಸಿ ಹಾಗೂ ಆಪಾದಿತರು ಹಾಗೂ ಪ್ರಾಸಿಕ್ಯೂಷನ್‌ನ ಪರವಾಗಿ ಮಾಡಿದ ನಿವೇದನೆಗಳನ್ನು ಪರಿಗಣಿಸಿ, ದಿನಾಂಕ: 20.12.2007ರ ತೀರ್ಪು ಹಾಗೂ ಆದೇಶದ ಮೂಲಕ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು, ಎಲ್ಲಾ ಆಪಾದಿತರನ್ನು ಅಧಿವಿಚಾರಿಸಿದ್ದಂಥ ಎಲ್ಲಾ ಅಪರಾಧಗಳಿಗೆ ಸಂಬಂಧಿಸಿದಂತೆ ಖುಲಾಸೆಗೊಳಿಸಿರುತ್ತದೆ. ಆಪಾದಿತನನ್ನು ಖುಲಾಸೆಗೊಳಿಸುವಾಗ, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ನಿಶಾನೆ ಪಿ.2ನ್ನು ಮರಣ ಕಾಲೀನ ಹೇಳಿಕೆಯೆಂದು ಒಪ್ಪಿಕೊಂಡಿರುವುದಿಲ್ಲ. ಅಲ್ಲದೆ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ವರದಕ್ಷಿಣೆಗೆ ಬೇಡಿಕೆಯಿಟ್ಟಿರುವುದನ್ನು ಒಪ್ಪಿಕೊಂಡಿರುವುದಿಲ್ಲ.

3. ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302, 34ನೇ ಪ್ರಕರಣದೊಂದಿಗೆ ಓದಲಾದ 498ಎ, 304–ಬಿ ಪ್ರಕರಣಗಳು ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 3, 4 ಹಾಗೂ 6ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತರನ್ನು ಖುಲಾಸೆಗೊಳಿಸುವ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಖುಲಾಸೆ ಆದೇಶದಿಂದ ಬಾಧಿತರಾಗಿರುವ ಹಾಗೂ ಅಸಂತುಷ್ಟರಾಗಿರುವ ಕರ್ನಾಟಕ ಸಕಾರವು ಕ್ರಿಮಿನಲ್ ಅಪೀಲು ಸಂಖ್ಯೆ:402/2008ನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಸಂಚಾರಿ ಪೀಠ, ಗುಲ್ಬರ್ಗಾ ಇಲ್ಲಿಗೆ ಸಲ್ಲಿಸಿರುತ್ತದೆ. ದಾಖಲಾಗಿರುವ ಎಲ್ಲಾ ಸಾಕ್ಷ್ಯಗಳನ್ನು ಮರು ವಿವೇಚಿಸಿ, ವಿವರಣಾತ್ಮಕವಾಗಿ ಸಮರ್ಥ ಕಾರಣಗಳನ್ನು ನೀಡಿ, ಪ್ರಶ್ನಿತ ತೀರ್ಪು ಹಾಗೂ ಆದೇಶದ ಮೂಲಕ ಉಚ್ಚ ನ್ಯಾಯಾಲಯವು, ಮೂಲ ಆಪಾದಿತ ಸಂಖ್ಯೆ.1 ಮೃತಳ ಪತಿಯನ್ನು

ಖುಲಾಸೆ ಮಾಡುವ ಮಟ್ಟಿಗೆ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಖುಲಾಸೆ ಆದೇಶವನ್ನು ರದ್ದುಮಾಡಿ, ಭಾರತ ದಂಡ ಸಂಹಿತೆಯ 302, 498ಎ ಪ್ರಕರಣಗಳಡಿಯಲ್ಲಿ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 4ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆತನನ್ನು ದೋಷಾರೋಪಿಯೆಂದು ಅಭಿಪ್ರಾಯಪಟ್ಟಿರುತ್ತದೆ. ಮೂಲ ಆಪಾದಿತ ಸಂಖ್ಯೆ.1ನ್ನು ಅಪರಾಧ ನಿರ್ಣೀತನನ್ನಾಗಿಸುವಾಗ, ಉಚ್ಚ ನ್ಯಾಯಾಲಯವು, 10,000/– ರೂ.ಗಳ ಜುಲ್ಮಾನೆಯೊಂದಿಗೆ ಜೀವಾವಧಿ ಶಿಕ್ಷೆ ನೀಡುವಂತೆ ಹಾಗೂ ಜುಲ್ಮಾನೆ ಸಂದಾಯಕ್ಕೆ ತಪ್ಪಿದಲ್ಲಿ, ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಐದು ತಿಂಗಳುಗಳ ಕಾರಾವಾಸ ಶಿಕ್ಷೆ ನೀಡುವಂತೆ ಮೂಲ ಆಪಾದಿತ ಸಂಖ್ಯೆ:1ನ್ನು ಶಿಕ್ಷೆಗೆ ಗುರಿಪಡಿಸಲಾಗಿರುತ್ತದೆ. ಉಚ್ಚ ನ್ಯಾಯಾಲಯವು ಭಾರತ ದಂಡ ಸಂಹಿತೆಯ 498ಎ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಎರಡು ವರ್ಷಗಳ ಕಾರಾವಾಸ ಹಾಗೂ 5,000/– ರೂ.ಗಳ ಜುಲ್ಮಾನೆ ಸಂದಾಯ ಮಾಡುವಂತೆ, ಜುಲ್ಮಾನೆ ಸಂದಾಯ ಮಾಡುವಲ್ಲಿ ವಿಫಲರಾದಲ್ಲಿ ಮತ್ತೆ ಮೂರು ತಿಂಗಳುಗಳ ಕಠಿಣ ಕಾರಾವಾಸ ಶಿಕ್ಷೆಗೆ ಗುರಿಮಾಡಿರುತ್ತದೆ. ಉಚ್ಚ ನ್ಯಾಯಾಲಯವು ವರದಕ್ಷಿಣೆ ನಿಷೇಧ ಅಧಿನಿಯಮದ 4ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ, ಮೂಲ ಆಪಾದಿತ ಸಂಖ್ಯೆ:1ಕ್ಕೆ ಆರು ತಿಂಗಳುಗಳ ಕಾರಾವಾಸವನ್ನು ಹಾಗೂ 1,000/– ರೂ.ಗಳ ಜುಲ್ಮಾನೆಯನ್ನು ವಿಧಿಸಿ, ಜುಲ್ಮಾನೆ ಸಂದಾಯ ಮಾಡಲು ವಿಫಲವಾದಲ್ಲಿ ಮತ್ತೆ ಒಂದು ತಿಂಗಳ ಕಾಲ ಸಾದಾ ಕಾರಾವಾಸ

ಶಿಕ್ಷೆಗೆ ಗುರಿಯಾಗತಕ್ಕದ್ದೆಂಬ ಶಿಕ್ಷೆಯನ್ನು ವಿಧಿಸಿರುತ್ತದೆ. ಮುಂದುವರೆದು ಉಚ್ಚ ನ್ಯಾಯಾಲಯವು ವಿಧಿಸಲಾದ ಎಲ್ಲಾ ಶಿಕ್ಷೆಗಳು ಏಕಕಾಲೀನವಾಗಿ ನಡೆಯತಕ್ಕದ್ದು.

4. ಉಚ್ಚ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ತೀರ್ಪು ಹಾಗೂ ಆದೇಶದಿಂದ ಬಾಧಿತನಾಗಿರುವನೆಂದು ಹಾಗೂ ಅಸಂತುಷ್ಟನಾಗಿರುವನೆಂದು ಭಾವಿಸಿ, ಮೂಲ ಆಪಾದಿತ ಸಂಖ್ಯೆ:1 ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾನೆ.

5. ಆಪಾದಿತರ ಪರ ಹಾಜರಾದ ಮಾನ್ಯ ವಕೀಲರಾದ **ಶ್ರೀ ವೆಂಕಟೇಶ್ವರ ರಾವ್ ಅನುಮೋಲುರವರು** ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳ ಹಿನ್ನೆಲೆಯಲ್ಲಿ, ಉಚ್ಚ ನ್ಯಾಯಾಲಯವು ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಖುಲಾಸೆ ಆದೇಶವನ್ನು ವಜಾಗೊಳಿಸಿ, ರದ್ದುಮಾಡಿ ದೊಡ್ಡ ಪ್ರಮಾದವನ್ನೇ ಮಾಡಿದೆಯೆಂದು ನಿವೇದಿಸಿಕೊಂಡಿರುತ್ತಾರೆ.

5.1. ಮುಂದುವರೆದು, ಆಪಾದಿತರ ಪರವಾಗಿ ಹಾಜರಾದ ಮಾನ್ಯ ವಕೀಲರು, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಆಪಾದಿತರನ್ನು ಖುಲಾಸೆ ಮಾಡುವಾಗ ಸಮರ್ಥ ಕಾರಣಗಳನ್ನು ನೀಡಿರುತ್ತದೆಂದೂ, ದಾಖಲೆ ಮೇಲಿರುವ ಎಲ್ಲಾ ಸಾಕ್ಷ್ಯಗಳನ್ನು ಮರು ಪರಿಶೀಲಿಸುವುದು ಉಚ್ಚ ನ್ಯಾಯಾಲಯಕ್ಕೆ ಅನುಮತೀಯವಾಗಿದ್ದಾಗ್ಯೂ, ಉಚ್ಚ ನ್ಯಾಯಾಲಯವು, ಆಪಾದಿತನನ್ನು ಖುಲಾಸೆಗೊಳಿಸುವಾಗ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಮಹತ್ವವೆಂದು ಪರಿಗಣಿಸಿದ ಕಾರಣಗಳೊಂದಿಗೆ ವ್ಯವಹರಿಸಿರುವುದಿಲ್ಲ ಹಾಗೂ/ಅಥವಾ ಪರಿಗಣಿಸಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ.

5.2 ಮುಂದುವರೆದು, ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಖುಲಾಸೆಯ ತೀರ್ಪು ಹಾಗೂ ಆದೇಶವನ್ನು ವಿಪರ್ಯಯಗೊಳಿಸುವಾಗ, ಉಚ್ಚ ನ್ಯಾಯಾಲಯವು ಖುಲಾಸೆಯ ವಿರುದ್ಧದ ಅಪೀಲಿನ ವ್ಯಾಪ್ತಿ ಹಾಗೂ ಪರಿಧಿಯನ್ನು ಪರಿಗಣಿಸಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ.

5.3. ಮುಂದುವರೆದು, ಆಪಾದಿತರ ಪರ ಹಾಜರಾದ ಮಾನ್ಯ ವಕೀಲರು, ಈ ನ್ಯಾಯಾಲಯವು ನೀಡಿರುವ ಹಲವಾರು ತೀರ್ಪುಗಳಲ್ಲಿ ವ್ಯಕ್ತವಾಗಿರುವಂತೆ, ಪ್ರಕರಣದಲ್ಲಿ ನೀಡಿರುವ ಸಾಕ್ಷ್ಯದ ಮೇಲೆ ಎರಡು ಅಭಿಪ್ರಾಯಗಳನ್ನು ತಳೆಯುವ ಸಾಧ್ಯತೆಯಿದ್ದಲ್ಲಿ, ಒಂದು ಆಪಾದಿತನನ್ನು ತಪ್ಪಿತಸ್ಥನೆಂದು ಗುರುತಿಸಿದರೆ, ಮತ್ತೊಂದು ಆತನು ಮುಗ್ಧನೆಂದು ಗುರುತಿಸುತ್ತದೆ. ಆಗ ಈ ಆಯಾಮಗಳಲ್ಲಿ ಯಾವುದು ಆಪಾದಿತನ ಪರವಾಗಿರುತ್ತದೋ ಅದನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಮುಂದುವರೆದು, ಆಪಾದಿತರ ಪರವಾಗಿ ಹಾಜರಾದ ಮಾನ್ಯ ವಕೀಲರು, ಮೊದಲ ಅಪೀಲು ಪ್ರಾಧಿಕಾರವಾಗಿರುವ ಉಚ್ಚ ನ್ಯಾಯಾಲಯವು, ನ್ಯಾಯೋಚಿತವಾದ ತೀರ್ಮಾನಕ್ಕೆ ಬರಲು ದಾಖಲೆ ಮೇಲಿನ ಇಡೀ ಸಾಕ್ಷ್ಯವನ್ನು ಮರು ವಿವೇಚಿಸುವಲ್ಲಿ ಸಮರ್ಥನೀಯವಾಗಿದ್ದಾಗ್ಯೂ, ಮೊದಲ ಅಪೀಲು ನ್ಯಾಯಾಲಯವು ಸಾಕ್ಷ್ಯವನ್ನು ಮರು ವಿವೇಚಿಸುವಾಗ ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳನ್ನು ವಿಶ್ಲೇಷಿಸುತ್ತದೆ. ತರುವಾಯ ದಾಖಲಿಸಬೇಕಾದ ಮೌಲ್ಯಯುತ ಕಾರಣಗಳಿಗೆ ಸಂಬಂಧಿಸಿದಂಥ ಅಪೀಲು

ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ಅಂಥ ನಿರ್ಣಯವನ್ನು ವಿಪರ್ಯಯಗೊಳಿಸುತ್ತದೆಂದು ನಿವೇದಿಸಿಕೊಂಡಿರುತ್ತಾರೆ.

5.4. ಮುಂದುವರೆದು, ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಪ್ರಸ್ತುತ ಪ್ರಕರಣದಲ್ಲಿ, ಸಾಕ್ಷ್ಯವನ್ನು ಮರು–ವಿಚಾರಿಸುವಾಗ ಹಾಗೂ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆಯ ಆದೇಶವನ್ನು ವಿಪರ್ಯಯಗೊಳಿಸುವಾಗ, ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳನ್ನು ವಿಶ್ಲೇಷಿಸಿರುವುದಿಲ್ಲ ಹಾಗೂ ಆಪಾದಿತನನ್ನು ಖುಲಾಸೆಗೊಳಿಸಿದ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಪರಿಗಣಿಸಿದಂಥ ವಾಸ್ತವಾಂಶಗಳನ್ನು ಪರಿಗಣಿಸದೆ ತನ್ನ ಸ್ವಂತ ನಿರ್ಣಯಗಳನ್ನು ನೀಡಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ಉಚ್ಚ ನ್ಯಾಯಾಲಯವು, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಖುಲಾಸೆ ಆದೇಶದ ವಿರುದ್ಧ ಅಪೀಲು ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಾಗ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿರುತ್ತದೆಂದು ನಿವೇದಿಸಿಕೊಳ್ಳಲಾಗಿರುತ್ತದೆ.

5.5. ಮೇಲಿನ ನಿವೇದನೆಗಳನ್ನು ಬೆಂಬಲಿಸುವಲ್ಲಿ, ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯದ ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ: *ಚಂದು – ವಿರುದ್ಧ – ಮಹಾರಾಷ್ಟ್ರ ಸರ್ಕಾರ, (2002) 9 ಎಸ್‌ಸಿಸಿ 408 (7ನೇ ಪ್ಯಾರಾ ); ಸುರೀಂದರ್ ಸಿಂಗ್ – ವಿರುದ್ಧ ಉತ್ತರ ಪ್ರದೇಶ ಸರ್ಕಾರ (2003) 10 ಎಸ್‌ಸಿಸಿ 26(18 ಮತ್ತು 19ನೇ ಪ್ಯಾರಾಗಳು); ದೇವತಾ ವೆಂಕಟಸ್ವಾಮಿ*

*ಅಲಿಯಾಸ್ ರಂಗಯ್ಯ – ವಿರುದ್ಧ ಪಬ್ಲಿಕ್ ಪ್ರಾಸಿಕ್ಯೂಟರ್, ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯ (2003) 10 ಎಸ್‌ಸಿಸಿ 700 ( 5ನೇ ಪ್ಯಾರಾ); ಮೈನ್ ಪಾಲ್ – ವಿರುದ್ಧ– ಹರಿಯಾಣ ಸರ್ಕಾರ (2004) 10 ಎಸ್‌ಸಿಸಿ 692 (12ನೇ ಪ್ಯಾರಾ); ಚಾಣಾಕ್ಯ ಧೀಬಾರ್ (ದಿವಂಗತ) – ವಿರುದ್ಧ – ಪಶ್ಚಿಮ ಬಂಗಾಳ ಸರ್ಕಾರ (2004) 12 ಎಸ್‌ಸಿಸಿ 398 (18ನೇ ಪ್ಯಾರಾ); ಕಲ್ಯಾಣ ಸಿಂಗ್ – ವಿರುದ್ಧ – ಮಧ್ಯಪ್ರದೇಶ ಸರ್ಕಾರ (2006) 13 ಎಸ್‌ಸಿಸಿ 303 (7ನೇ ಪ್ಯಾರಾ) ಬನ್ನಾರೆಡ್ಡಿ –ವಿರುದ್ಧ– ಕರ್ನಾಟಕ ಸರ್ಕಾರ (2018) 5 ಎಸ್‌ಸಿಸಿ 790 (10 ಮತ್ತು 11ನೇ ಪ್ಯಾರಾಗಳು); ಮಾದತಿಲ್ ನಾರಾಯಣ – ವಿರುದ್ಧ– ಕೇರಳ ಸರ್ಕಾರ (2018) 14 ಎಸ್‌ಸಿಸಿ 513 (8 ಮತ್ತು 9ನೇ ಪಾರಾಗಳು) ಮತ್ತು ಮೊಹಮ್ಮದ್ ಅಕ್ತರ್ ಅಲಿಯಾಸ್ ಕರಿ – ವಿರುದ್ಧ – ಬಿಹಾರ್ ಸರ್ಕಾರ ಜೆಟಿ 2018(12) ಎಸ್‌ಸಿ 68: (2019) 2 ಎಸ್‌ಸಿಸಿ 513.*

5.6. ಮುಂದುವರೆದು, ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಗುಣಾರ್ಹತೆಗಳ ಹೊರತಾಗಿ, ಉಚ್ಚ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 302 ಹಾಗೂ 498ಎ ಪ್ರಕರಣಗಳಡಿಯಲ್ಲಿ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 4ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಅಪೀಲುದಾರ ಮೂಲ ಆಪಾದಿತ ಸಂಖ್ಯೆ:1ನ್ನು ತಪ್ಪಿತಸ್ಥನೆಂದು ಅಭಿಪ್ರಾಯಪಟ್ಟು ಗುರುತರವಾದ ತಪ್ಪನ್ನು ಎಸಗಿದೆಯೆಂದೂ ನಿವೇದಿಸಿಕೊಂಡಿರುತ್ತಾರೆ.

5.7. ಮುಂದುವರೆದು, ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ ಅಪೀಲುದಾರ – ಮೂಲ ಆಪಾದಿತ ಸಂಖ್ಯೆ1 ನ್ನು ಅಪರಾಧ ನಿರ್ಣೀತನನ್ನಾಗಿಸುವಾಗ, ಉಚ್ಚ ನ್ಯಾಯಾಲಯವು, ಆಪಾದಿತ ಮರಣಕಾಲೀನ ಹೇಳಿಕೆಯನ್ನು ಉದಾಹರಿಸಿ ಹಾಗೂ/ಅಥವಾ ಪರಿಗಣಿಸಿ ಗುರುತರವಾದ ತಪ್ಪನ್ನು ಎಸಗಿದೆಯೆಂದು ತಮ್ಮ ವಾದವನ್ನು ನಿವೇದಿಸಿರುತ್ತಾರೆ. ಉಚ್ಚ ನ್ಯಾಯಾಲಯವು ಕೆಲವು ತಿದ್ದುಪಾಟುಗಳೊಂದಿಗಿನ ಮುದ್ರಿತ ಕಾಗದ ಮತ್ತು/ಅಥವಾ ಕೆಲವು ಅನಿಶ್ಚಿತ ಹೇಳಿಕೆಗಳೊಂದಿಗಿರುವ ಬೇರೆ ಬೇರೆ ಗುಣಮಟ್ಟದ ಕಾಗದಗಳೊಂದಿಗೆ ಆಪಾದಿತ ಮರಣಕಾಲೀನ ಘೋಷಣೆಯನ್ನು ದಾಖಲು ಮಾಡಿರುವುದನ್ನು ಯುಕ್ತವಾದ ಆಯಾಮದಲ್ಲಿ ಪುರಸ್ಕರಿಸಲು ವಿಫಲವಾಗಿದೆಯೆಂದೂ ನಿವೇದಿಸಿಕೊಂಡಿರುತ್ತಾರೆ. ಅಲ್ಲದೆ ಉಚ್ಚ ನ್ಯಾಯಾಲಯವು, ಬೀಗ ಹಾಕಿರುವ ಕೋಣೆಯಲ್ಲಿದ್ದ ಮೃತಳಿಗೆ ಶೇ.90ರಷ್ಟು ಸುಟ್ಟ ಗಾಯಗಳುಂಟಾಗಿದ್ದು 800 ಎಂ.ಎಲ್ ಸೀಮೆಎಣ್ಣೆಯಿದ್ದು ಯಾವುದೇ ಮುಚ್ಚಳವಿಲ್ಲದಂಥ ಸೀಮೆಎಣ್ಣೆ ಸ್ಟೌವ್ ಹಾಗೂ ಬೆಂಕಿಪೊಟ್ಟಣ ಅದೇ ಕೋಣೆಯಲ್ಲಿದ್ದು ಅದಕ್ಕೆ ಬೆಂಕಿ ಹೇಗೆ ಅಂಟಿಕೊಳ್ಳಲಿಲ್ಲವೆಂಬುದನ್ನು ಯುಕ್ತ ಆಯಾಮದಲ್ಲಿ ಪರಿಗಣಿಸಿಲ್ಲವೆಂದೂ, ಇದಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್‌ನಿಂದ ಯಾವುದೇ ವಿವರಣೆಯಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ.

5.8. ಈ ಮೇಲಿನ ನಿವೇದನೆಗಳನ್ನು ಮಾಡಿ, ಈ ನ್ಯಾಯಾಲಯದ ಮೇಲಿನ ನಿರ್ಣಯಗಳನ್ನು ಉದಾಹರಿಸಿ, ಪ್ರಸ್ತುತ ಅಪೀಲನ್ನು ಅಂಗೀಕರಿಸಿ, ಉಚ್ಚ ನ್ಯಾಯಾಲಯವು

ಹೊರಡಿಸಿರುವ ಅಪರಾಧ ನಿರ್ಣಯದ ಪ್ರಶ್ನಿತ ತೀರ್ಪು ಹಾಗೂ ಆದೇಶವನ್ನು ವಜಾಗೊಳಿಸಿ, ರದ್ದುಪಡಿಸಲು ಕೋರಲಾಗಿರುತ್ತದೆ.

6. ಪ್ರತ್ಯರ್ಜಿದಾರ–ರಾಜ್ಯ ಸರ್ಕಾರದ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು, ಪ್ರಸ್ತುತ ಅಪೀಲನ್ನು ವಿರೋಧಿಸುವಾಗ, ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಲ್ಲಿ ಹಾಗೂ ಖುಲಾಸೆಯ ಆದೇಶದ ವಿರುದ್ಧದ ಅಪೀಲಿನಲ್ಲಿನ ಅಧಿಕಾರಗಳನ್ನು ಚಲಾಯಿಸುವಾಗ ಅನುಮತೀಯವಾಗಿರುವಂಥ ದಾಖಲೆ ಮೇಲೆ ಇಡೀ ಸಾಕ್ಷ್ಯವನ್ನು ಮರು–ವಿಚಾರಣೆ ಮಾಡುವಲ್ಲಿ, ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆ ತೀರ್ಪು ಮತ್ತು ವಿಪರ್ಯಯಗೊಳಿಸುವಲ್ಲಿ ಹಾಗೂ ತದನುಸಾರವಾಗಿ ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತರ ಅಪರಾಧ ನಿರ್ಣಯಿಸುವಲ್ಲಿ ಯಾವುದೇ ತಪ್ಪನ್ನು ಎಸಗಿರುವುದಿಲ್ಲವೆಂದು ನಿವೇದನೆ ಸಲ್ಲಿಸಿರುತ್ತಾರೆ.

6.1 ಪ್ರತ್ಯರ್ಜಿದಾರ – ರಾಜ್ಯದ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ದಾಖಲು ಮಾಡಿದ ಮೂಲ ಆಪಾದಿತರು ಖುಲಾಸೆ ಮಾಡುವಾಗ ದಾಖಲು ಮಾಡಿದ ನಿರ್ಣಯಗಳನ್ನು ದಾಖಲೆ ಮೇಲಿನ ಸಾಕ್ಷ್ಯಕ್ಕೆ ಹಾಗೂ ವಿರುದ್ಧವೂ ಆಗಿವೆಯೆಂಬುದು ಕಂಡುಬಂದಿದೆಯೆಂದೂ ಆ ತರುವಾಯ, ಸಾಕ್ಷ್ಯದ ಮರು ವಿಚಾರಣೆ ನಡೆಸಿದ ಮೇಲೆ ಉಚ್ಚ ನ್ಯಾಯಾಲಯವು ಆಪಾದಿತನು ತಪ್ಪಿತಸ್ಥನೆಂದೂ,

ಈ ವಿಷಯದಲ್ಲಿ ಈ ನ್ಯಾಯಾಲಯವು ಮಧ್ಯೆ ಪ್ರವೇಶಿಸುವ ಅಗತ್ಯವಿರುವುದಿಲ್ಲವೆಂದೂ ತಮ್ಮ ಅಹವಾಲನ್ನು ನಿವೇದಿಸಿಕೊಂಡಿರುತ್ತಾರೆ.

6.2 ಪ್ರತ್ಯರ್ಜಿದಾರ–ರಾಜ್ಯ ಸರ್ಕಾರದ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಈ ನ್ಯಾಯಾಲಯವು ನೀಡಿರುವ ಸಾಕಷ್ಟು ತೀರ್ಪುಗಳಲ್ಲಿ ಖುಲಾಸೆಯ ವಿರುದ್ಧದ ಅಪೀಲಿನಲ್ಲಿ ಅಪೀಲು ನ್ಯಾಯಾಲಯದ ಅಧಿಕಾರಗಳು ಅಪರಾಧ ನಿರ್ಣಯದ ವಿರುದ್ಧದ ಅಪೀಲಿನಲ್ಲಿರುವುದಕ್ಕಿಂತ ಕಡಿಮೆಯಿರುವುದಿಲ್ಲವೆಂಬ ಅಭಿಪ್ರಾಯ ಇರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ಈ ನ್ಯಾಯಾಲಯವು ತನ್ನ ಹಿಂದಿನ ತೀರ್ಪುಗಳಲ್ಲಿ ಅಭಿಪ್ರಾಯಪಟ್ಟಿರುವಂತೆ, ಉಚ್ಚ ನ್ಯಾಯಾಲಯವು ಖುಲಾಸೆಯ ಆದೇಶದ ವಿರುದ್ಧ ಅಪೀಲನ್ನು ಸುನಾವಣೆ ಮಾಡುವಾಗ ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯವನ್ನು ಮರು ವಿಚಾರಣೆ ಮಾಡಬೇಕಾಗಿದ್ದು, ಹಾಗೆ ಮಾಡುವಾಗ, ಮರಣಕಾಲೀನ ಹೇಳಿಕೆ ನಂಬಲರ್ಹವೆಂದು ಕಂಡುಬಂದಲ್ಲಿ, ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ಅಪೀಲುದಾರರ ಅಪರಾಧ ನಿರ್ಣಯಿಸುವುದರಲ್ಲಿ ಯಾವುದೇ ದೋಷವಿರುವುದಿಲ್ಲವೆಂದು ತಮ್ಮ ಇಂಗಿತವನ್ನು ನಿವೇದಿಸಿಕೊಂಡಿರುತ್ತಾರೆ.

6.3 ಪ್ರತ್ಯರ್ಜಿದಾರ–ರಾಜ್ಯ ಸರ್ಕಾರದ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಪ್ರಸ್ತುತ ಪ್ರಕರಣದಲ್ಲಿ, ಉಚ್ಚ ನ್ಯಾಯಾಲಯವು ವೈದ್ಯಕೀಯ ಸಾಕ್ಷ್ಯವನ್ನು; ಮರಣ ಕಾಲೀನ ಹೇಳಿಕೆ ಹಾಗೂ ಅಪರಾಧ ಎಸಗಿರುವಂಥ ಇಲ್ಲಿನ ಅಪೀಲುದಾರ – ಮೂಲ ಆಪಾದಿತ ಸಂಖ್ಯೆ:1 ಆಗಿರುವಂಥ ಪ್ರಾಸಿಕ್ಯೂಷನ್ ವಾದವನ್ನು

ಸಂಪೂರ್ಣವಾಗಿ ಬೆಂಬಲಿಸುವಂಥ ಇತರೆ ಪ್ರಾಸಿಕ್ಯೂಷನ್ ಸಾಕ್ಷ್ಯವನ್ನು ವಿವರವಾಗಿ ಪರಿಗಣಿಸಿರುತ್ತದೆ. ಆದ್ದರಿಂದ ಉಚ್ಚ ನ್ಯಾಯಾಲಯವು ಇಲ್ಲಿನ ಅಪೀಲುದಾರ ಮೂಲ ಆಪಾದಿತ ಸಂಖ್ಯೆ:1 ನ್ನು ಯುಕ್ತವಾಗಿಯೇ ಅಪರಾಧಿಯೆಂದು ನಿರ್ಣಯಿಸಿರುತ್ತದೆಂದು ತಮ್ಮ ಅಹವಾಲನ್ನು ನಿವೇದಿಸಿರುತ್ತಾರೆ.

6.4 ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಆಪಾದಿತನನ್ನು ಖುಲಾಸೆ ಮಾಡಿದಂಥ ಕಾರಣಗಳು ಹಾಗೂ ಸಾಕ್ಷ್ಯಾಧಾರಗಳನ್ನು ಗಮನಿಸಿದಲ್ಲಿ, ಅವು ದಾಖಲಾಗಿರುವ ಸಾಕ್ಷ್ಯಕ್ಕೆ ವಿಪರ್ಯಯವೂ, ವಿರುದ್ಧವೂ ಆಗಿವೆಯೆಂದು ನಿವೇದಿಸಿಕೊಳ್ಳಲಾಗಿರುತ್ತದೆ. ಮೂಲ ಆಪಾದಿತರನ್ನು ಖುಲಾಸೆಗೊಳಿಸುವಾಗ, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಕೆಲವು ಕ್ಷುಲ್ಲಕ ವೈರುಧ್ಯಗಳಿಗೆ ತಪ್ಪಾಗಿ ಹೆಚ್ಚಿನ ಮಹತ್ವವನ್ನು ನೀಡಿರುತ್ತಾರೆಂದು ನಿವೇದಿಸಿಕೊಳ್ಳಲಾಗಿರುತ್ತದೆ. ಆದಾಗ್ಯೂ ಕೃತ್ಯವನ್ನು ರುಜುವಾತುಪಡಿಸುವಂಥ ವೈದ್ಯಕೀಯ ಸಾಕ್ಷ್ಯ ಹಾಗೂ ಮರಣಕಾಲೀನ ಹೇಳಿಕೆಯ ರೂಪದಲ್ಲಿರುವ ನಿರ್ಣಾಯಕ ಸಾಕ್ಷ್ಯವನ್ನೇ ಪರಿಗಣಿಸಿರುವುದಿಲ್ಲ. ಆದ್ದರಿಂದ ಉಚ್ಚ ನ್ಯಾಯಾಲಯವು ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಹಾಗೂ ಖುಲಾಸೆ ಆದೇಶವನ್ನು ವಿಪರ್ಯಯಗೊಳಿಸುವ ಮೂಲಕ ಆಪಾದಿತನನ್ನು ಯುಕ್ತವಾಗಿಯೇ ಅಪರಾಧ ನಿರ್ಣೀತನನ್ನಾಗಿಸಿರುತ್ತದೆಂದು ನಿವೇದಿಸಿಕೊಳ್ಳಲಾಗಿರುತ್ತದೆ.

6.5. ಖುಲಾಸೆ ಆದೇಶವನ್ನು ವಜಾ ಮಾಡಿ, ರದ್ದುಪಡಿಸುವಾಗ, ಉಚ್ಚ ನ್ಯಾಯಾಲಯವು ಖುಲಾಸೆ ಆದೇಶ ಹೊರಡಿಸಿರುವಂಥ ಕಾರಣಗಳನ್ನು ಪರಿಶೀಲಿಸುವಲ್ಲಿ

ವಿಫಲವಾಗಿದೆಯೆಂದು ಹಾಗೂ ಖುಲಾಸೆಯ ತೀರ್ಪು ಹಾಗೂ ಆದೇಶದ ವಿರುದ್ಧ ಅಪೀಲು ನ್ಯಾಯಾಲಯವು ಉಪವೇಶನದಲ್ಲಿರುವಾಗ ಉಚ್ಚ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆಯೆಂದೂ ಅಪೀಲುದಾರರ ಪರವಾಗಿ ನಿವೇದಿಸಿಕೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಪ್ರತ್ಯರ್ಜಿದಾರ–ರಾಜ್ಯ ಸರ್ಕಾರದ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಕೇವಲ ಮೇಲೆ ಹೇಳಿದ ಸಾಕ್ಷ್ಯಾಧಾರಗಳ ಮೇಲೆ ಹಾಗೂ ಅನ್ಯಥಾ ಈ ನ್ಯಾಯಾಲಯವು ಸಾಕ್ಷ್ಯವನ್ನು ಮರು ವಿವೇಚಿಸುವಲ್ಲಿ, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಆಪಾದಿತನ ಖುಲಾಸೆಯನ್ನು ದಾಖಲಿಸುವಲ್ಲಿ ಸಮರ್ಥನೀಯವಾಗಿರುವುದಿಲ್ಲ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಮಾಡಿದ ಸಾಕ್ಷ್ಯ ಮೌಲ್ಯ ನಿರ್ಣಯವು ಉದ್ದೇಶಪೂರ್ವಕವಾಗಿ ದೋಷಪೂರ್ಣವಾಗಿದೆಯೆಂದು ಕಂಡುಬಂದಿರುತ್ತದೆಂದೂ ಅಲ್ಲದೆ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸುವಲ್ಲಿನ ಉಚ್ಚ ನ್ಯಾಯಾಲಯದ ಅಂತಿಮ ತೀರ್ಮಾನದ ಗುಣಾರ್ಹತೆಗಳ ಮೇಲೆ ಸರಿಯಾದುದೆಂದು ಕಂಡು ಬಂದಿದ್ದರೂ ಕೂಡ ಉಚ್ಚ ನ್ಯಾಯಾಲಯವು, ಖುಲಾಸೆ ಆದೇಶವನ್ನು ಹೊರಡಿಸಿರುವಂಥ ಕಾರಣಗಳನ್ನು ಪರಿಗಣಿಸಿರುವುದಿಲ್ಲ/ವಿಚಾರಣೆ ಮಾಡಿರುವುದಿಲ್ಲವೆಂಬ ಮೇಲಿನ ಏಕಮಾತ್ರ ಆಧಾರದ ಮೇಲೆ, ಆಪಾದಿತರ ಅಪರಾಧ ನಿರ್ಣಯವನ್ನು ರದ್ದುಪಡಿಸಬೇಕೆಂದು ಅಗತ್ಯಪಡಿಸುವಂತಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಮೇಲಿನ ನಿವೇದನೆಗಳಿಗೆ ಪೂರಕವಾಗಿ, ಪ್ರತ್ಯರ್ಜಿದಾರ – ರಾಜ್ಯದ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ: *ಅಟ್ಲೈ –ವಿರುದ್ಧ – ಉತ್ತರ ಪ್ರದೇಶ ಸರ್ಕಾರ ಎಐಆರ್ 1955*

*ಎಸ್‌ಸಿ 807;ಅಹೆರ್ ರಾಜಾ ಖಿಮಾ – ವಿರುದ್ಧ – ಸೌರಾಷ್ಟ್ರ ಸರ್ಕಾರ 1955(2) ಎಸ್‌ಸಿಆರ್ 1285; ಉಮೇದ್‌ಬಾಯ್ ಜಾದವ್‌ಬಾಯ್ – ವಿರುದ್ಧ ಗುಜರಾತ್ ಸರ್ಕಾರ (1978) 1 ಎಸ್‌ಸಿಸಿ 228; ಕೆ. ಗೋಪಾಲ ರೆಡ್ಡಿ – ವಿರುದ್ಧ – ಆಂಧ್ರಪ್ರದೇಶ ಸರ್ಕಾರ (1979) 1 ಎಸ್‌ಸಿಸಿ 355; ಸಾಂಬಸಿವನ್ –ವಿರುದ್ಧ– ಕೇರಳ ಸರ್ಕಾರ (1998) 5 ಎಸ್‌ಸಿಸಿ 412, ಕೆ. ರಾಮಕೃಷ್ಣನ್ ಉನ್ನಿತಾನ್ – ವಿರುದ್ಧ– ಕೇರಳ ಸರ್ಕಾರ (1999) 3 ಎಸ್‌ಸಿಸಿ 309.*

6.6. ಮೇಲಿನಂತೆ ನಿವೇದನೆಗಳನ್ನು ಮಾಡಿ, ಈ ನ್ಯಾಯಾಲಯದ ಮೇಲೆ ಪ್ರಸ್ತಾಪಿಸಿದ ತೀರ್ಪುಗಳನ್ನು ಉದಾಹರಿಸಿ, ಪ್ರಸ್ತುತ ಅಪೀಲನ್ನು ವಜಾ ಮಾಡಲು ಕೋರಲಾಗಿರುತ್ತದೆ.

7. ನಾವು, ಸಂಬಂಧಪಟ್ಟ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸುದೀರ್ಘವಾದ ಅಹವಾಲನ್ನು ಆಲಿಸಿರುತ್ತೇವೆ.

7.1 ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆ ತೀರ್ಪು ಹಾಗೂ ಆದೇಶವನ್ನು ಹಾಗೂ ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿನ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಮೂಲ ಆಪಾದಿತನ ಖುಲಾಸೆ ಹಾಗೂ ಅಪರಾಧ ನಿರ್ಣಯವನ್ನು ವಿಪರ್ಯಯಗೊಳಿಸಿ ಉಚ್ಚ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ತೀರ್ಪು ಹಾಗೂ ಆದೇಶವನ್ನು ಲಕ್ಷ್ಯವಿರಿಸಿ ಗಮನಿಸಿರುತ್ತೇವೆ.

7.2. ಅಲ್ಲದೆ, ನಾವು ಅಪೀಲುದಾರ– ಮೂಲ ಆಪಾದಿತ ಸಂಖ್ಯೆ.1ರ ತಪ್ಪನ್ನು ಸ್ವತಃ ಮನವರಿಕೆ ಮಾಡಿಕೊಳ್ಳಲು ಮರು ವಿಚಾರಣೆಗೆ ಒಳಪಡಿಸಿರುತ್ತೇವೆ. ಅಲ್ಲದೆ ನಾವು ಆಪಾದಿತನನ್ನು ಖುಲಾಸೆ ಮಾಡುವಾಗ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದ ಕಾರಣಗಳು ಹಾಗೂ ನಿರ್ಣಯಗಳನ್ನು ಪರಿಗಣಿಸಬೇಕಾಗಿರುತ್ತದೆ. ಅಲ್ಲದೆ ಅಪೀಲುದಾರ–ಮೂಲ ಆಪಾದಿತ ಸಂಖ್ಯೆ:1ನ್ನು ಅಪರಾಧ ನಿರ್ಣೀತನನ್ನಾಗಿಸಿದಾಗ ಉಚ್ಚ ನ್ಯಾಯಾಲಯವು ದಾಖಲಿಸಿದ ಕಾರಣಗಳು ಹಾಗೂ ನಿರ್ಣಯಗಳನ್ನು ಸಹ ಪರಿಗಣಿಸಿರುತ್ತೇವೆ.

8. ದಾಖಲೆ ಮೇಲಿರುವ ಸಮಗ್ರ ಸಾಕ್ಷ್ಯವನ್ನು ಹೊಸದಾಗಿ ಪರಿಗಣಿಸಿ ಹಾಗೂ ದಾಖಲೆ ಮೇಲಿರುವ ಸಮಗ್ರ ಸಾಕ್ಷ್ಯವನ್ನು ಮರು ವಿಚಾರಣೆ ಮಾಡಿ, ನಾವು ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಅಪೀಲುದಾರ – ಮೂಲ ಆಪಾದಿತ ಸಂಖ್ಯೆ.1ನ್ನು ತಪ್ಪಿತಸ್ಥನೆಂದು ಅಭಿಪ್ರಾಯಪಟ್ಟು ಯಾವುದೇ ತಪ್ಪನ್ನು ಎಸಗಿರುವುದಿಲ್ಲವೆಂದು ಸ್ಪಷ್ಟವಾದ ಅಭಿಪ್ರಾಯಕ್ಕೆ ಬಂದಿರುತ್ತೇವೆ. ಪ್ರಸ್ತುತ ಪ್ರಕರಣದಲ್ಲಿ, ಸ್ವತಂತ್ರ ಸಾಕ್ಷಿದಾರರು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಪ್ರಾ.ಸಾ.28) ರುಜುವಾತುಪಡಿಸಿ, ಬೆಂಬಲಿಸಿರುವಂಥ ಮೃತಳು ನೀಡಿದ ಮರಣ ಕಾಲೀನ ಹೇಳಿಕೆಯನ್ನು ವೈದ್ಯಕೀಯ ಅಧಿಕಾರಿಗಳು ಪರಿಶೀಲಿಸುವ ಮೂಲಕ ಸುಸ್ಥಾಪಿತಗೊಳಿಸಿ, ರುಜುವಾತುಪಡಿಸಿರುತ್ತಾರೆ. ಅಲ್ಲದೆ ವೈದ್ಯಾಧಿಕಾರಿಗಳು ಹೇಳಿಕೆ ನೀಡುವಾಗ ರೋಗಿ ಪ್ರಜ್ಞಾಪೂರ್ವಕವಾಗಿಯೂ, ಸುಸಂಗತವಾಗಿಯೂ ಹಾಗೂ ಸ್ವಸ್ಥ

ಮನಸ್ಥಿತಿಯನ್ನು ಹೊಂದಿದ್ದಳೆಂದು ಪ್ರಮಾಣೀಕರಿಸಿರುತ್ತಾರೆ. ಮರಣ ಕಾಲೀನ ಹೇಳಿಕೆಯನ್ನು ದಾಖಲೆ ಮಾಡಿದಂಥ ಹಾಗೂ ಪ್ರಾ.ಸಾ.28 ಎಂದು ಪ್ರಾಸಿಕ್ಯೂಷನ್ ಮೂಲಕ ವಿಚಾರಣೆಗೊಳಗಾದಂಥ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ರು ಈ ಮುಂದಿನಂತೆ ಸಾಕ್ಷ್ಯ ನೀಡಿರುತ್ತಾರೆ:

*"ಇವರು, ಪ್ರಸ್ತಾಪಿತ ಅವಧಿಯಲ್ಲಿ ಭೋಂಗೀರ್‌ನಲ್ಲಿ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇವರು ಸಿಕಂದರಾಬಾದ್‌ನ XIನೇ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮುಂದುವರೆದು ಇವರು ಐ.ಒ., ಪಿ.ಎಸ್., ಅಫಜಲ್ ಗುಂಜ್ ರವರಿಂದ ಸ್ವೀಕರಿಸಿದ ಕೋರಿಕೆಯನ್ನು ಅನುಸರಿಸಿ, ದಿನಾಂಕ: 14.2.2005ರಂದು ಉಸ್ಮಾನಿಯಾ ಜನರಲ್ ಆಸ್ಪತ್ರೆಗೆ ಪ್ರಯಾಣಿಸಿ, ಬೆಳಿಗ್ಗೆ ಸುಮಾರು 6.25ಕ್ಕೆ ಸದರಿ ಸ್ಥಳಕ್ಕೆ ತಲುಪಿರುತ್ತಾರೆ; ಪೊಲೀಸ್ ಹಾಗೂ ಕರ್ತವ್ಯ ನಿರತ ವೈದ್ಯರ ನೆರವಿನೊಂದಿಗೆ ತೀವ್ರತರವಾಗಿ ಸುಟ್ಟಗಾಯಗಳ ವಾರ್ಡ್‌ಗೆ ತೆರಳಿ, ವಿಜಯ್‌ಮೋಹನ್ ಸಿಂಗ್‌ನ ಪತ್ನಿಯಾದ ಅಭಿಲಾಷಾ ಕೌರ್ ಎಂಬ ಹೆಸರಿನ ತೊಂದರೆಗೊಳಗಾದ ಗಾಯಾಳುವನ್ನು ಸಂಪರ್ಕಿಸಿರುತ್ತಾರೆ. ಡಾ॥ ರಾಜೇಶ್‌ರವರು ಕರ್ತವ್ಯ ನಿರತ ವೈದ್ಯರಾಗಿರುತ್ತಾರೆ. ಇವರು ಸದರಿ ವೈದ್ಯರೊಂದಿಗೆ ಮಾತುಕತೆ ನಡೆಸಿ, ತನ್ನ ಎದುರು ಹೇಳಿಕೆ ನೀಡಿದ ಅಭಿಲಾಷಾ ಕೌರ್ ಎಂಬ ಗಾಯಾಳುವಿನ ಮಾನಸಿಕ ಸ್ವಾಸ್ಥ್ಯವು ಸರಿಯಾಗಿದೆಯೆಂದು ಸ್ವತಃ ತಾವೆ ಮನವರಿಕೆ ಮಾಡಿಕೊಂಡು,*

ಈಗಾಗಲೇ ಗುರುತು ಮಾಡಿರುವಂಥ ನಿಶಾನೆ ಪಿ.2 ಎಂಬ ಯುಕ್ತ ದಸ್ತಾವೇಜಿನಲ್ಲಿ ಹಿಂಬರಹವನ್ನೂ ಸಹ ಪಡೆದಿರುತ್ತಾರೆ. ಮುಂದುವರೆದು, ಬಾಧಕಕ್ಕೊಳಗಾದ ಗಾಯಾಳುವಿಗೆ ಪೂರ್ವಭಾವಿ ಪ್ರಶ್ನೆಗಳನ್ನು ಕೇಳಿ, ತರುವಾಯ ಆಕೆ ನೀಡಿರುವ ಹೇಳಿಕೆಗಳು ಯಾವುದೇ ಒತ್ತಡ ಅಥವಾ ಒತ್ತಾಯಕ್ಕೆ ಮಣಿಯದ ಸ್ವಯಂ ಪ್ರೇರಿತ ಹೇಳಿಕೆಗಳ ಸ್ವರೂಪದಲ್ಲಿರುವುದನ್ನು ಮನವರಿಕೆ ಮಾಡಿಕೊಂಡು, ಆಕೆಯ ಹೇಳಿಕೆಯನ್ನು ಅವರೆ ನಿಶಾನೆ ಪಿ–2ರಲ್ಲಿ ಸ್ವಂತ ಕೈಬರಹದಲ್ಲಿ ದಾಖಲಿಸಿರುತ್ತಾರೆ. ನಿಶಾನೆ ಪಿ–2(ಡಿ)ಯು ಅವರ ಸಹಿಯಾಗಿರುತ್ತದೆ; ನಿಶಾನೆ ಪಿ–2ರಲ್ಲಿನ ಕೈ ಬರಹದ ಭಾಗವು ಅವರ ಕೈಬರಹವಾಗಿದ್ದು, ಅವು ಸತ್ಯವಾದವು ಹಾಗೂ ಸರಿಯಾದುದೂ ಆಗಿರುತ್ತದೆ; ಅವು ಪ್ರಶ್ನೋತ್ತರ ಮಾಲಿಕೆಯ ರೂಪದಲ್ಲಿರುತ್ತದೆ. ಮುಂದುವರೆದು, ಇವರು ಆಕೆ ಹಾಗು ಆತನಿಗೆ ತಿಳಿದಿರುವಂಥ ಹಿಂದಿ ಭಾಷೆಯಲ್ಲಿ ತೊಂದರೆಗೊಳಗಾದ ಗಾಯಾಳು ಅಭಿಲಾಷಾ ಕೌರ್‌ಗೆ ಅದರಲ್ಲಿರುವ ಅಂಶಗಳ ಕುರಿತು ಓದಿ ಹೇಳಿದ್ದು, ಆ ದಸ್ತಾವೇಜಿನ ಸರಿತನವನ್ನು ಒಪ್ಪಿಕೊಂಡು ತೊಂದರೆಗೊಳಗಾದ ಗಾಯಾಳು ನಿಶಾನೆ ಪಿ–2(ಎ) ಪ್ರಕಾರ ಇವರ ಸಮ್ಮುಖದಲ್ಲಿ ಸಹಿ ಮಾಡಿರುತ್ತಾಳೆ; ಅದಕ್ಕೆ ನಿಶಾನೆ ಪಿ–2(ಸಿ) ಪ್ರಕಾರ ಕರ್ತವ್ಯನಿರತ ವೈದ್ಯರ ಸಹಿಯನ್ನು ಪಡೆದಿರುತ್ತೇನೆಂದು ಸಾಕ್ಷ್ಯ ನೀಡಿರುತ್ತಾರೆ. ಮುಂದುವರೆದು, ಇದು ತುಂಬಾ ಎಚ್ಚರಿಕೆಯಿಂದ ವರ್ತಿಸಬೇಕಾದ ವಿಷಯವಾದ್ದರಿಂದ ನಿಶಾನೆ ಪಿ–2(ಎ)ದ ಅಡಿಯಲ್ಲಿ ತೊಂದರೆಗೊಳಗಾದ ಅಭಿಲಾಷ ಕೌರ್‌ಳ ಆರ್.ಟಿ.ಐ ಅನ್ನು ಪಡೆಯಲಾಯಿತು; ತೊಂದರೆಗೊಳಗಾದ ಅಭಿಲಾಷ ಕೌರ್ ತನ್ನ ಪತಿಯ ವಿರುದ್ಧ ತನ್ನ ಮೇಲೆ ಹಲ್ಲೆ ನಡೆಸಿದ ಬಗ್ಗೆ ಹಾಗೂ, ಆತ ತನ್ನ ತಾಯಿ ಹಾಗು ಸಹೋದರಿಯ ಪ್ರಭಾವಕ್ಕೊಳಗಾಗಿ ಹಣಕ್ಕಾಗಿ ಪೀಡಿಸುತ್ತಿದ್ದನೆಂದೂ ಹೇಳಿಕೆ ನೀಡಿರುತ್ತಾಳೆ. ಆತನ ಮೊದಲ ಪತ್ನಿಯನ್ನು ಸಹ ಈತನೆ ಬೆಂಕಿಯಿಟ್ಟು ಸುಟ್ಟಿದ್ದ ಕಾರಣದಿಂದಲೇ ಮೃತಳಾಗಿರುತ್ತಾಳೆಂದೂ ಸಹ ಈತನ ವಿರುದ್ಧ ದೂರಿರುತ್ತಾಳೆಂದೂ ಸಾಕ್ಷ್ಯ ನೀಡಿರುತ್ತಾನೆ. ಮುಂದುವರೆದು, ನಿಶಾನೆ ಪಿ–2ನ್ನು

*ದಾಖಲಿಸುವ ಸಮಯದಲ್ಲಿ ತಾನು, ಕರ್ತವ್ಯ ನಿರತ ವೈದ್ಯ ಹಾಗೂ ತೊಂದರೆಗೊಳಗಾದ ಗಾಯಾಳುವನ್ನು ಹೊರತು ಪಡಿಸಿದಂತೆ ಯಾರೊಬ್ಬರೂ ತಮ್ಮ ಬಳಿಯಿರಲಿಲ್ಲವೆಂದೂ ಸಾಕ್ಷ್ಯ ನೀಡಿರುತ್ತಾನೆ. ನಿಶಾನೆ ಪಿ–2ರ ಮೇರೆಗೆ ಬಾಧಕಕ್ಕೊಳಗಾದ ಗಾಯಾಳುವಿನ ಅಂಥ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವಾಗ ಬಾಧಕಕ್ಕೊಳಗಾದ ಗಾಯಾಳು ಆಸ್ಪತ್ರೆಯ ಸಾಮಾನ್ಯ ಕೊಠಡಿಯಲ್ಲಿದ್ದಳು. ಇವರು ದಸ್ತಾವೇಜಿನೊಂದಿಗೆ ತಾವು ಕಾರ್ಯನಿರ್ವಹಿಸುವ ಸ್ಥಳಕ್ಕೆ ಹಿಂದಿರುಗಿ, ಒಂದು ರಕ್ಷಾ ಪತ್ರದೊಂದಿಗೆ, ಉಸ್ಮಾನಿಯಾ ಆಸ್ಪತ್ರೆ ಹಾಗು ಅಫ್ಜಲ್ ಗುಂಜ್ ಪೊಲೀಸ್ ಠಾಣೆಗಳು ಯಾರ ಅಧಿಕಾರ ವ್ಯಾಪ್ತಿಗೆ ಬರುತ್ತದೋ, ಅಂಥ IV ಮಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್, ಹೈದರಾಬಾದ್ ಇವರಿಗೆ ನಿಶಾನೆ ಪಿ–2ನ್ನು ಕಳುಹಿಸಿರುತ್ತಾರೆ. ಹಾಗು ನಿಶಾನೆ ಪಿ–2(ಎಫ್) ಇವರ ಸಹಿಯಾಗಿರುತ್ತದೆ ಎಂದು ಸಾಕ್ಷ್ಯ ನೀಡಿರುತ್ತಾರೆ. ಮುಂದುವರೆದು 15 ದಿನಗಳವರೆಗೆ ಹೈದರಾಬಾದಿನ ಎಲ್ಲ ಆಸ್ಪತ್ರೆಗಳಲ್ಲಿ ಅಂಥ ಹೇಳಿಕೆಗಳನ್ನು ದಾಖಲಿಸುವ ಹೊಣೆಗಾರಿಕೆ ಇವರದಾಯಿತು. ಹಾಗು ಮುಂದಿನ 15 ದಿನಗಳಲ್ಲಿ ಕೆಲವು ಇತರೆ ಮ್ಯಾಜಿಸ್ಟ್ರೇಟರು ಇರುತ್ತಿದ್ದರು; ಅದೇ ರೀತಿ ಕರ್ತವ್ಯವು ಪ್ರತೀ 15 ದಿನಗಳಿಗೊಮ್ಮೆ ಬದಲಾಗುತ್ತಿದ್ದು ಮತ್ತು ಈ ಹೇಳಿಕೆಯನ್ನು ದಾಖಲಿಸುವುದಕ್ಕೆ ಸಂಬಂಧಿಸಿದ ದಿನಾಂಕವು, ಇವರ ಕರ್ತವ್ಯದ ದಿನಗಳಲ್ಲಿ ಬಂದಿದುದರಿಂದ, ಇವರು ಸದರಿ ವಿಷಯವನ್ನು ದಾಖಲಿಸಬೇಕಾಯಿತೆಂದೂ ಸಾಕ್ಷ್ಯ ನೀಡಿರುತ್ತಾರೆ."*

8.1. ಹೇಳಿಕೆ ನೀಡುವ ಸಮಯದಲ್ಲಿ ರೋಗಿಯು ಹೇಳಿಕೆ ನೀಡುವಂಥ ಪ್ರಜ್ಞೆ ಸುಸಂಬದ್ಧತೆ ಹಾಗೂ ಮಾನಸಿಕ ಸ್ವಾಸ್ಥತೆಯನ್ನು ಹೊಂದಿದ್ದಳೆಂದು ಪ್ರಮಾಣಿಕರಿಸಿರುತ್ತಾನೆ. ಮರಣಕಾಲೀನ ಹೇಳಿಕೆಯಲ್ಲಿ, ಮೃತಳು 7 ಹಾಗೂ 8ನೇ ಪ್ರಶ್ನೆಗಳಿಗೆ ಉತ್ತರಿಸುವಾಗ ಮ್ಯಾಜಿಸ್ಟ್ರೇಟರ ಮುಂದೆ ನಿರ್ದಿಷ್ಟವಾಗಿ ಹೇಳಿರುವುದು ಈ ಮುಂದಿನಂತಿರುತ್ತದೆ;

*"ಪ್ರಶ್ನೆ ಸಂ.7. ನಿನಗೆ ಏನಾಯ್ತು ಹಾಗು ಇದು ಹೇಗಾಯ್ತು?*

*ನಿನ್ನೆ ಸಂಜೆ 5.00 ಗಂಟೆಯ ವೇಳೆಗೆ ಗುರುದ್ವಾರದ ಬಳಿಯಿರುವ ನನ್ನ ಮನೆಯಲ್ಲಿ ನನ್ನ ಪತಿ ವಿಜಯ ಮೋಹನ್ ಸಿಂಗ್, ಸೀಮೆಎಣ್ಣೆಯ ಬತ್ತಿ ಸ್ಟವ್‌ನಿಂದ ಸೀಮೆಎಣ್ಣೆಯನ್ನು ನನ್ನ ಮೈ ಮೇಲೆ ಸುರಿದನು. ನಾನು ಹಸಿರು ಬಣ್ಣದ ಅಂಗಿ ಹಾಗು ಷಲ್ವಾರ್‌ಅನ್ನು ಧರಿಸಿದ್ದೆನು. ನಂತರ ಆತ ಬೆಂಕಿಕಡ್ಡಿ ಗೀರಿ, ನನ್ನ ದೇಹದ ಮೇಲೆ ಉರಿಯುವ ಬೆಂಕಿಕಡ್ಡಿಯನ್ನು ಹಾಕಿ, ಕೋಣೆಯ ಬಾಗಿಲಿನ ಬೀಗಹಾಕಿ ಹೊರ ನಡೆದನು. ಇದರಿಂದ ನನ್ನ ಮುಖ, ಕೈ ಹಾಗು ದೇಹದ ಇತರೆ ಅಂಗಗಳು ಸುಟ್ಟು ಹೋದವು.*

*ಪ್ರಶ್ನೆ ಸಂ.8. ಇದು ಬೇರೊಬ್ಬರ ದುಷ್ಪ್ರೇರಣೆಯಿಂದ ನಡೆದ ಕೃತ್ಯವೆ ಅಥವಾ ಈ ಕೃತ್ಯಕ್ಕೆ ಸಂಬಂಧಿಸಿದಂತೆ ನೀನು ಯಾರಾನ್ನಾದರೂ ದೂಷಿಸಲಿಚ್ಛಿಸುವೆಯಾ?*

*ನನ್ನ ಪತಿ ನನಗೆ ಈ ಕೃತ್ಯವನ್ನು ಎಸಗಿರುತ್ತಾನೆ. ಈತ ನನ್ನನ್ನು ಹೊಡೆಯುತ್ತಿದ್ದನು ಹಾಗು ತನ್ನ ತಾಯಿ ಹಾಗು ಸಹೋದರಿಯರ ಮಾತು ಕೇಳಿಕೊಂಡು ಈ ಕೃತ್ಯವನ್ನು ಎಸಗಿರುತ್ತಾನೆ. ಇವನು ನನ್ನನ್ನು ಹಣಕ್ಕಾಗಿ ಪೀಡಿಸುತ್ತಿದ್ದು, ಚಿತ್ರಹಿಂಸೆ ಕೊಡುತ್ತಿದ್ದನು. ಈತನ ಮೊದಲ ಪತ್ನಿಯನ್ನೂ ಸಹ ಇವನೇ ಸುಟ್ಟು ಹಾಕಿದ್ದನು."*

*10, 11 ಹಾಗು 12ನೇ ಪ್ರಶ್ನೆಗಳಿಗೆ ಉತ್ತರಿಸುವಾಗ, ತೊಂದರೆಗೊಳಗಾದ ಗಾಯಾಳು ಈ ಮುಂದಿನಂತೆ ಹೇಳಿರುತ್ತಾಳೆ:*

*ಪ್ರಶ್ನೆ ಸಂ.10. ನಿನ್ನ ಪತಿ ವಿಜಯ್ ಮೋಹನ್ ಸಿಂಗ್‌ನು ಯಾವ ರೀತಿ ವರ್ತಿಸುತ್ತಿದ್ದನು.*

*ನನ್ನ ಪತಿ ನನ್ನನ್ನು ಹುಚ್ಚಿಯೆಂದು ನಿಂದಿಸುತ್ತಾ, ಆಗಾಗ ಹಣ ತರಲು ಹೇಳುತ್ತಲೇ ಇದ್ದನು. ಇವನಿಗೆ ಈ ಮೊದಲು ಕಮರ್ಜೀತ್ ಕೌರ್ ಎಂಬ ಹೆಸರಿನ ಪತ್ನಿಯಿದ್ದಳು. ಆಕೆಗೂ ಕೂಡ ತನ್ನ ಪತಿಯೇ ಬೆಂಕಿ ಹಚ್ಚಿದ್ದು, ಆಕೆ ಮೃತಳಾಗಿರುತ್ತಾಳೆ. ನನ್ನ ಪತಿ ಪ್ರಕರಣವನ್ನು*

*ನಿರ್ವಹಿಸಿಕೊಂಡು, ಹೊರಗೆ ಬಂದಿರುತ್ತಾನೆ. (ರೋಗಿಯು ನೋವಿನಲ್ಲಿದ್ದಾಳೆ). ಇವನು ನನಗೆ ನನ್ನ ತಂದೆತಾಯಿಯರಿಂದ ಹಣ ತರುವಂತೆ ಪೀಡಿಸುತ್ತಿದ್ದನು.*

*ಪ್ರಶ್ನೆ ಸಂ.11. ನೀನು ಕೋಣೆಯಿಂದ ಹೇಗೆ ಹೊರಗೆ ಬಂದೆ? ಆಗ ನಿನ್ನ ಮಗಳು ಎಲ್ಲಿದ್ದಳು?*

*ನಾನು ಬಾಗಿಲನ್ನು ಹೇಗೋ ತೆಗೆದು ಹೊರಬಂದೆ. ನನ್ನ ಮಗಳು ಮತ್ತೊಂದು ಕೋಣೆಯಲ್ಲಿದ್ದಳು. ನಾನು ನೋವು ಮತ್ತು ಉರಿಯಿಂದ ಬಳಲಿಹೋದೆನು.*

*ಪ್ರಶ್ನೆ ಸಂ.12. ನೀನು ಇನ್ನೇನಾದರೂ ಹೇಳಲಿಚ್ಛಿಸಿವೆಯಾ?*

*ಬೀದರ್‌ನಲ್ಲಿನ ಪೊಲೀಸರಿಗೆ ಮೇಲಿನ ಯಾವ ವಿಷಯವನ್ನು ಹೇಳಲಿಲ್ಲ. ನನ್ನ ಪತಿ ಹಾಗು ಮೈದುನನಾದ ಮದನ್ ಮೋಹನ್ ಸಿಂಗ್ ಸತ್ಯವಾದ ವಿಷಯವನ್ನು ಹೇಳದಂತೆ ಹೆದರಿಕೆಯೊಡ್ಡಿದ್ದರು. ಈಗ ನಾನು ಸತ್ಯವನ್ನು ಹೇಳುತ್ತಿದ್ದೇನೆ. ಸಾರ್ ದಯಮಾಡಿ ನನಗೆ ಸಹಾಯಮಾಡಿ ಮತ್ತು ನನ್ನನ್ನು ಉಳಿಸಿ. ನನ್ನ ಮಗುವನ್ನು ಚೆನ್ನಾಗಿ ನೋಡಿಕೊಳ್ಳಬೇಕು."*

9. ಹಾಗಾಗಿ, ಅಪೀಲುದಾರನನ್ನು ಒಳಗೊಂಡ ಮರಣಕಾಲೀನ ಹೇಳಿಕೆಯನ್ನು, ವೈದ್ಯರು ಪರೀಕ್ಷಿಸುವ ಮೂಲಕ ಹಾಗು ಮರಣಕಾಲೀನ ಹೇಳಿಕೆಯನ್ನು ದಾಖಲಿಸುವಂಥ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಪ್ರಾಸಿಕ್ಯೂಷನ್ ಮೂಲಕ ಸುಸ್ಥಾಪಿಸಬೇಕಾಗಿರುತ್ತದೆ ಹಾಗು ರುಜುವಾತು ಪಡಿಸಬೇಕಾಗಿರುತ್ತದೆ. ವೈದ್ಯಕೀಯ ಸಾಕ್ಷ್ಯ ಹಾಗೂ ಮರಣಕಾಲೀನ ಹೇಳಿಕೆ ಹಾಗೂ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ಸಾಕ್ಷ್ಯದ ರೂಪದಲ್ಲಿ ಮೇಲಿನ ಪ್ರಬಲ ಸಾಕ್ಷ್ಯಗಳಿದ್ದಾಗ್ಯೂ, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಕನಿಷ್ಠ ಪ್ರಮಾಣದ ವೈರುಧ್ಯಗಳು/ನಿರಸನಗಳಿಂದಾಗಿ ಇದನ್ನು ಬಿಡಬೇಕಾಗಿರುತ್ತದೆ. ಅಲ್ಲದೆ ಇದು ದಾಖಲಾಗಿ, ಅಡಿಗೆ ಮನೆಯಲ್ಲಿ ಅಡಿಗೆ ಮಾಡುವಾಗ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿತೆಂದು ಹೇಳಿದಳೆಂದು ನಡೆದ ಘಟನೆಯನ್ನು ನಿರೂಪಿಸಿದ ಮೇಲೆ ವೈದ್ಯರಿಗೆ ಮಾನ್ಯ

ಅಧಿವಿಚಾರಣಾ ನ್ಯಾಯಾಲಯವು ನೀಡಿರುವ ತೀರ್ಪು ಹಾಗು ಆದೇಶದ ಮೂಲಕ, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ತೊಂದರೆಗೊಳಗಾದ ಗಾಯಾಳುವಿನ ಆರಂಭಿಕ ಹೇಳಿಕೆಗಳಿಗೆ ಆಧಾರವಾದ ಪ್ರಾಮುಖ್ಯತೆ ನೀಡಿರುತ್ತದೆಂಬುದು ಕಂಡುಬರುತ್ತದೆ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು, ಮರಣಕಾಲೀನ ಹೇಳಿಕೆಯಲ್ಲಿ ಹೇಳಿದ ಮೇಲಿನ ವಿವರಣೆಯನ್ನು ಪರಿಗಣಿಸಿರುವುದಿಲ್ಲ. ಎಲ್ಲಾ ವಾಸ್ತವಿಕ ಸಂದರ್ಭಗಳು, ವೈದ್ಯಕೀಯ ಸಾಕ್ಷ್ಯ ಹಾಗೂ ಇತರೆ ಸಾಕ್ಷ್ಯವನ್ನು ಪರಿಗಣಿಸಿಯೂ ಕೂಡ, ಪ್ರತಿವಾದಿಗಳು ಅಚ್ಚರಿ ತರುವ ರೀತಿಯಲ್ಲಿ ವಿಫಲವಾಗಿದ್ದು, ಇದು ಆಕಸ್ಮಿಕ ಬೆಂಕಿ ದುರಂತ/ಸಾವು ಎಂದು ರುಜುವಾತು ಪಡಿಸಲಾಗಿರುತ್ತದೆ.

ಅಪೀಲುದಾರ–ಮೂಲ ಆಪಾದಿತ ಸಂ.1 ಘಟನೆ ನಡೆದಾಗ ಮನೆಯಲ್ಲಿದ್ದು, ಘಟನೆ ಸಂಭವಿಸಿದ ಕೂಡಲೇ ಮನೆಬಿಟ್ಟು ಓಡಿಹೋಗಿರುತ್ತಾನೆ. ಹಾಗಾಗಿ, ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ಸ್ಪಷ್ಟವಾಗಿಯೂ ದೋಷಪೂರ್ಣವಾಗಿದ್ದು, ಇದು ತಳೆದ ತೀರ್ಮಾನವು ಸಂಪೂರ್ಣವಾಗಿ ಅಸಮರ್ಥನೀಯವಾಗಿರುತ್ತದೆಂಬುದು ನಮ್ಮ ತೀರ್ಮಾನವಾಗಿರುತ್ತದೆ.

10. ನಾವು ದಾಖಲಿಸಿದ ಮೇಲಿನ ನಿರ್ಣಯಗಳ ಹಿನ್ನೆಲೆಗಳನ್ನು ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆ ಆದೇಶದೊಂದಿಗೆ ಮಧ್ಯೆ ಪ್ರವೇಶಿಸುವ ಮೂಲಕ ಉಚ್ಚ ನ್ಯಾಯಾಲಯವು, ಅದು ಹೊರಡಿಸಿದ್ದ ಖುಲಾಸೆ ಆದೇಶದ ಕಾರಣಗಳನ್ನು ಪರಿಶೀಲಿಸದೆ, ಆಪಾದಿತನನ್ನು ಅಪರಾಧ ನಿರ್ಣೀತನನ್ನಾಗಿಸಿದೆ ಎಂಬ ಒಂದೇ ಆಧಾರಾಂಶದ ಮೇಲೆ, ಈ ವಿಷಯದಲ್ಲಿ ಈ ನ್ಯಾಯಾಲಯವು ಮಧ್ಯೆಪ್ರವೇಶಿಸುವ ಅಗತ್ಯವಿದೆಯೇ? ಎಂಬುದನ್ನು ಪರಿಗಣಿಸಬೇಕಾದ ಅಗತ್ಯವಿರುತ್ತದೆ.

11. ಒಂದು ಗುರುತರವಾದ ಪ್ರಶ್ನೆಯನ್ನು **ಉಮೇದಾ ಭಾಯ್ ಜಾದವ್‌ಬಾಯಿ** (ಈ ಹಿಂದೆ ಉಲ್ಲೇಖಿಸಿದ) ಪ್ರಕರಣದಲ್ಲಿ ಈ ನ್ಯಾಯಾಲಯವು ಪರಿಗಣಿಸಬೇಕಾದ ಸಂದರ್ಭ ಒದಗಿಬಂದಿತ್ತು. ಈ ನ್ಯಾಯಾಲಯದ ಮುಂದಿದ್ದ ಪ್ರಕರಣದಲ್ಲಿ, ಉಚ್ಚ ನ್ಯಾಯಾಲಯವು, ದಾಖಲಾಗಿರುವ ಇಡೀ ಸಾಕ್ಷ್ಯದ

ಮರು–ವಿಶ್ಲೇಷಣೆ ಮಾಡಲು ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ್ದ ಖುಲಾಸೆ ಆದೇಶದೊಂದಿಗೆ ಮಧ್ಯೆಪ್ರವೇಶಿಸಿತ್ತು. ಆದಾಗ್ಯೂ, ಉಚ್ಚ ನ್ಯಾಯಾಲಯವು ಖುಲಾಸೆಯನ್ನು ವಿಪರ್ಯಯಗೊಳಿಸುವಾಗ, ಆಪಾದಿತನನ್ನು ಖುಲಾಸೆಗೊಳಿಸಲು ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ನೀಡಿರುವ ಕಾರಣಗಳನ್ನು ಪರಿಗಣಿಸಿರುವುದಿಲ್ಲ. ಉಚ್ಚ ನ್ಯಾಯಾಲಯದ ತೀರ್ಪನ್ನು ಸ್ಥಿರೀಕರಿಸುವಾಗ, ಈ ನ್ಯಾಯಾಲಯವು ಈ ಮುಂದಿನಂತೆ ಪ್ಯಾರಾ 10ರಲ್ಲಿ ತನ್ನ ಅಭಿಪ್ರಾಯವನ್ನು ನೀಡಿರುತ್ತದೆ:

*"10 ಒಮ್ಮೆ, ಖುಲಾಸೆಯ ಆದೇಶದ ವಿರುದ್ಧ ಅಪೀಲನ್ನು ಯುಕ್ತವಾಗಿ ಪುರಸ್ಕರಿಸಿದಾಗ, ಉಚ್ಚ ನ್ಯಾಯಾಲಯವು, ಸ್ವತಂತ್ರವಾಗಿ ಇಡೀ ಸಾಕ್ಷ್ಯವನ್ನು ಮರು–ವಿಶ್ಲೇಷಿಸಲು ಹಾಗೂ ತನ್ನ ಸ್ವಂತ ತೀರ್ಮಾನ ತಳೆಯಲು ಹಕ್ಕುಳ್ಳದ್ದಾಗಿರುತ್ತದೆ. ಸಾಮಾನ್ಯವಾಗಿ, ಉಚ್ಚ ನ್ಯಾಯಾಲಯವು ಸೆಷನ್ಸ್ ನ್ಯಾಯಾಲಯಗಳ ನ್ಯಾಯಾಧೀಶರು ಸಾಕ್ಷ್ಯವನ್ನು ಯುಕ್ತವಾಗಿ ವಿಶ್ಲೇಷಿಸಿದ್ದಲ್ಲಿ, ತರುವಾಯ ಅವರು ತಳೆಯುವ ತೀರ್ಮಾನಕ್ಕೆ ಯುಕ್ತ ಪ್ರಾಮುಖ್ಯತೆಯನ್ನೇ ನೀಡುತ್ತದೆ. ಈ ನಿಯಮವು, ಪ್ರಕರಣದ ವಿಲಕ್ಷಣ ಸಂದರ್ಭಗಳಲ್ಲಿ ತುಂಬಾ ಪ್ರಮುಖವಾದ ಹಾಗು ನಿರ್ಣಾಯಕವಾದ ಆಯಾಮವನ್ನು ಸಂಪೂರ್ಣವಾಗಿ ದೋಷಯುಕ್ತವಾಗಿ ಸೆಷನ್ಸ್ ನ್ಯಾಯಾಧೀಶರು ಗ್ರಹಿಸಿರುವ ಪ್ರಸ್ತುತ, ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ."*

11.1. ಸಾಂಬಸಿವನ್ (ಈ ಹಿಂದೆ ಹೇಳಿದ) ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆ ಆದೇಶವನ್ನು ವಿಪರ್ಯಯಗೊಳಿಸಿ, ದಾಖಲೆ ಮೇಲಿನ ಇಡೀ ಸಾಕ್ಷ್ಯವನ್ನು ಮರು–ವಿಶ್ಲೇಷಿಸಿ ಆಪಾದಿತನು ತಪ್ಪಿತಸ್ಥನೆಂದು ಅಭಿಪ್ರಾಯಪಟ್ಟಿದ್ದಾಗ್ಯೂ, ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯದೊಂದಿಗೆ ವ್ಯವಹರಿಸಿ ಸಂಪೂರ್ಣವಾಗಿ ಕಾನೂನು ಬಾಹಿರವಾಗಿತ್ತೇ ಅಥವಾ ಇದು ತಳೆದ ತೀರ್ಮಾನವು ಸಂಪೂರ್ಣವಾಗಿ ಅಸಮರ್ಥನೀಯವಾದುದೇ ಎಂಬ ಪ್ರಶ್ನೆಗೆ ತನ್ನ ತೀರ್ಮಾನವನ್ನು ದಾಖಲಿಸಿರುವುದಿಲ್ಲ. ಮಾನ್ಯ

ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆ ಆದೇಶವು ವ್ಯತಿರಿಕ್ತವಾಗಿದ್ದು, ಖಚಿತತೆಯಿರುವುದಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡ ತರುವಾಯ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆಯನ್ನು ವಿಪರ್ಯಯಗೊಳಿಸಿ ಆಪಾದಿತನನ್ನು ಅಪರಾಧ ನಿರ್ಣೀತನನ್ನಾಗಿಸಿ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ದೃಢೀಕರಿಸಿ, ಈ ನ್ಯಾಯಾಲಯವು, ಉಚ್ಚ ನ್ಯಾಯಾಲಯವು ಹೊರಡಿಸಿರುವ ಅಪರಾಧ ನಿರ್ಣಯದ ಆದೇಶದಲ್ಲಿ ಮಧ್ಯಪ್ರವೇಶಿಸುವುದನ್ನು ನಿರಾಕರಿಸಿರುತ್ತದೆ. ಉಚ್ಚ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯದ ಆದೇಶವನ್ನು ಸ್ಥಿರೀಕರಿಸುವಾಗ, ಈ ನ್ಯಾಯಾಲಯವು ಪ್ಯಾರಾ 8ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

*"8. ನಾವು, ಉಚ್ಚ ನ್ಯಾಯಾಲಯವು ಮೇಲೆ ನಮೂದಿಸಿದ ತತ್ತ್ವಗಳನ್ನು ಅನುಸರಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಪೀಲಿನಡಿಯಲ್ಲಿನ ತೀರ್ಪನ್ನು ಪರಿಶೀಲಿಸಿರುತ್ತೇವೆ. ನಾವು, ಉಚ್ಚ ನ್ಯಾಯಾಲಯವು, ತನ್ನ ಮುಂದೆ ಪ್ರಸ್ತಾಪಿತವಾದ ಎಲ್ಲಾ ವಾದಗಳನ್ನು ಯುಕ್ತವಾಗಿ ಆಲಿಸಿ ಸಮರ್ಪಕವಾದ ತೀರ್ಪನ್ನು ನೀಡಿದ್ದಾಗ್ಯೂ ಖುಲಾಸೆಯ ಆದೇಶದಲ್ಲಿ ಮಧ್ಯಪ್ರವೇಶಿಕೆಯನ್ನು ಸಮರ್ಥಿಸುವಂಥ, ಸಾಕ್ಷ್ಯದೊಂದಿಗಿನ ವ್ಯವಹರಣೆಯಲ್ಲಿ ಅಧಿವಿಚಾರಣಾ ನ್ಯಾಯಾಲಯದ ದೃಷ್ಟಿಕೋನವು ಸ್ಪಷ್ಟವಾಗಿ ಕಾನೂನು ಬಾಹಿರವಾಗಿದೆಯೇ ಅಥವಾ ಇದು ತಳೆದ ತೀರ್ಮಾನವು ಸಂಪೂರ್ಣವಾಗಿ ಅಸಮರ್ಥನೀಯವಾಗಿದೆಯೇ ಎಂಬ ಪ್ರಶ್ನೆ ಕುರಿತಂತೆ ಮೊದಲು ದಾಖಲಿಸುವ ಇದರ ತೀರ್ಮಾನ ಎಂದರೆ (1996) 9 ಎಸ್‌ಸಿಸಿ 225 ದೋಷಿ ಪ್ರಕರಣದಲ್ಲಿ ಈ ನ್ಯಾಯಾಲಯವು <u>ನೀಡಿದ</u> ರೀತಿಯಲ್ಲಿ ಮುಂದುವರೆದಿರುವುದಿಲ್ಲವೆಂಬುದನ್ನು ಕಂಡುಕೊಂಡಿರುತ್ತೇವೆ. ಆದರೆ ತರುವಾಯ, ಅನುಪಾಲನೆಯೂ ಸ್ವತಃ ಈ ಅಪೀಲಿನಡಿಯಲ್ಲಿನ ತೀರ್ಪನ್ನು ರದ್ದುಪಡಿಸಲು ಸಮರ್ಥನೀಯವಾಗಿದೆಯೇ? ನಾವು ಹಾಗಿರುವುದಿಲ್ಲವೆಂದೇ ಭಾವಿಸುತ್ತೇವೆ. ನಮ್ಮ ದೃಷ್ಟಿಯಲ್ಲಿ,*

*ಅಂಥ ಸಂದರ್ಭದಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆಯ ಆದೇಶವನ್ನು ವಿಪರ್ಯಯಗೊಳಿಸಿದಂಥ ಅಪೀಲು ನ್ಯಾಯಾಲಯದ ತೀರ್ಪನ್ನು ಸಿಂಧುತ್ವವನ್ನು ಪರಿಗಣಿಸುವಂಥ ನ್ಯಾಯಾಲಯದ ದೃಷ್ಟಿಕೋನವು, ಸಾಕ್ಷ್ಯದೊಂದಿಗೆ ವ್ಯವಹರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯದ ದೃಷ್ಟಿಕೋನವು ಸ್ಪಷ್ಟವಾಗಿ ಕಾನೂನು ಬಾಹಿರವಾಗಿದ್ದಲ್ಲಿ ಅಥವಾ ಈ ಮೂಲಕ ತಳೆದ ತೀರ್ಮಾನಗಳು ತಾರ್ಕಿಕವಾಗಿ ಸಮರ್ಥನೀಯವಾಗಿಲ್ಲದಿದ್ದಲ್ಲಿ ಹಾಗೂ ಅಪೀಲು ನ್ಯಾಯಾಲಯಗಳ ತೀರ್ಪುಗಳು ಅಸ್ಥಿರತೆಗಳಿಂದ ದೂರವಾಗಿದ್ದಲ್ಲಿ, ಸ್ವತಃ ಮನವರಿಕೆಯಾಗಬೇಕಾಗಿರುತ್ತದೆ. ಹಾಗೆಂದು ಅಭಿಪ್ರಾಯಪಟ್ಟಲ್ಲಿ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮಧ್ಯೆಪ್ರವೇಶಿಕೆಯು ಸಮರ್ಥನೀಯವಾಗಿರುತ್ತದೆ. ಅಂಥ ಸಂದರ್ಭದಲ್ಲಿ ಅಪೀಲು ನ್ಯಾಯಾಲಯಗಳ ತೀರ್ಪು ಏಕೆ ತೊಂದರೆಗೊಳಗಾಗುತ್ತದೆಂಬುದಕ್ಕೆ ಯಾವುದೇ ಸ್ಪಷ್ಟ ಕಾರಣವಿರುವುದಿಲ್ಲ. ಆದರೆ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಯಾವುದೇ ದೌರ್ಬಲ್ಯದಿಂದ ಬಳಲುತ್ತಿಲ್ಲವೆಂಬ ತೀರ್ಮಾನಕ್ಕೆ ನ್ಯಾಯಾಲಯವು ಬಂದರೆ ಖುಲಾಸೆಯ ಆದೇಶದಲ್ಲಿ ಅಪೀಲು ನ್ಯಾಯಾಲಯವು ಮಧ್ಯೆಪ್ರವೇಶಿಸುವುದು ಸಮರ್ಥನೀಯವಲ್ಲವೆಂಬ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲ; ಆಗ ಅಂಥ ಸಂದರ್ಭದಲ್ಲಿ ಅಪೀಲು ನ್ಯಾಯಾಲಯದ ತೀರ್ಪನ್ನು, ಎರಡು ಸಮುಚಿತ ಆಯಾಮಗಳ ಮೇರೆಗೆ ರದ್ದು ಪಡಿಸಬೇಕಾಗಿದ್ದು ಖುಲಾಸೆಗೆ ಪೂರಕವಾಗಿರುವುದೊಂದನ್ನು ಮಾತ್ರ ಎತ್ತಿ ಹಿಡಿಯಬೇಕಾಗಿರುತ್ತದೆ. ಮೇಲಿನ ಚರ್ಚೆಯನ್ನು ಗಮನಿಸಿದಾಗ, ಈ ಪ್ರಕರಣದಲ್ಲಿನ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಲು ನಾವು ಮುಂದಾಗಬೇಕಾಗಿರುತ್ತದೆ."*

11.2. **ಕೆ. ರಾಮಕೃಷ್ಣ ಉಂಜಿಥನ್** ಪ್ರಕರಣದಲ್ಲಿ (ಈ ಹಿಂದೆ ಹೇಳಿದ) ಉಚ್ಚ ನ್ಯಾಯಾಲಯವು, ಖುಲಾಸೆಯ ಆದೇಶಕ್ಕನುಸಾರವಾಗಿ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಎಲ್ಲಾ ಕಾರಣಗಳನ್ನು ಪ್ರಸ್ತಾಪಿಸಿಲ್ಲವೆಂದು ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಅಹವಾಲಿನಲ್ಲಿ ಸ್ವಲ್ಪಮಟ್ಟಿನ

ಹುರುಳಿದ್ದಾಗ್ಯೂ, ಈ ನ್ಯಾಯಾಲಯವು, ಖುಲಾಸೆಯ ಆದೇಶವನ್ನು ದಾಖಲಿಸುವಲ್ಲಿ ಸೆಷನ್ಸ್ ನ್ಯಾಯಾಧೀಶರ ದೃಷ್ಟಿಕೋನವು ಯುಕ್ತವಾಗಿರುವುದಿಲ್ಲ ಹಾಗು ನ್ಯಾಯಾಧೀಶರು ತಳೆದ ತೀರ್ಮಾನವು ಸಮರ್ಥನೀಯವಾಗಿರುವುದಿಲ್ಲವೆಂಬುದು ಕಂಡುಬಂದ ತರುವಾಯ ಉಚ್ಚ ನ್ಯಾಯಾಲಯವು ಹೊರಡಿಸಲು ಅಪರಾಧ ನಿರ್ಣಯದ ಆದೇಶವನ್ನು ರದ್ದುಪಡಿಸಲು ನಿರಾಕರಿಸಿರುತ್ತದೆ. ಮುಂದುವರೆದು, ಈ ನ್ಯಾಯಾಲಯವು ಆಪಾದಿತನನ್ನು ಖುಲಾಸೆಗೊಳಿಸುವಾಗ ಸೂಕ್ತ/ಮುಖ್ಯ ಸಾಕ್ಷ್ಯವನ್ನು ಸೆಷೆನ್ಸ್ ನ್ಯಾಯಾಧೀಶರು ತ್ಯಜಿಸಿರುವುದು ಸಮರ್ಥನೀಯವಾಗಿಲ್ಲವಾದ್ದರಿಂದ, ಉಚ್ಚ ನ್ಯಾಯಾಲಯವು ತನ್ನ ಸ್ವಂತ ತೀರ್ಮಾನದಿಂದ ಸಾಕ್ಷ್ಯ ಹಾಗೂ ದಾಖಲೆಗಳನ್ನು ಮರುವಿಚಾರಣೆ ಮಾಡಲು ಸಂಪೂರ್ಣವಾಗಿ ಹಕ್ಕುಳ್ಳದ್ದಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ಈ ನ್ಯಾಯಾಲಯವು ಪ್ರತ್ಯಕ್ಷ್ಯ ಸಾಕ್ಷಿಗಳ ಸಾಕ್ಷ್ಯವನ್ನು ಪರಿಶೀಲಿಸಿ, ಪ್ರತ್ಯಕ್ಷ್ಯ ಸಾಕ್ಷಿಯ ಪುರಾವೆಯನ್ನು ತ್ಯಜಿಸುವುದಕ್ಕೆ ಅಧಿವಿಚಾರಣಾ ನ್ಯಾಯಾಲಯವು ಮುಂದಿಟ್ಟ ಕಾರಣಗಳು ಸಮರ್ಥನೀಯವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಅಲ್ಲದೆ ಈ ನ್ಯಾಯಾಲಯ, ಅಧಿವಿಚಾರಣಾ ನ್ಯಾಯಾಲಯವು ಮಾಡಿದ ಸಾಕ್ಷ್ಯದ ಮೌಲ್ಯಮಾಪನವು ನಿಸ್ಸಂದೇಹವಾಗಿ ದೋಷಪೂರ್ಣವಾಗಿರುವುದರಿಂದ ಮಾನ್ಯ ಸೆಷೆನ್ಸ್ ನ್ಯಾಯಾಧೀಶರು ಹೊರಡಿಸಿದ ಖುಲಾಸೆ ಆದೇಶದಲ್ಲಿ ಮಧ್ಯೆ ಪ್ರವೇಶಿಸುವುದು ಉಚ್ಚ ನ್ಯಾಯಾಲಯದ ಕರ್ತವ್ಯವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

11.3 **ಅಟ್ಲೈ** ಪ್ರಕರಣ (ಈ ಹಿಂದೆ ಹೇಳಿದ)ದಲ್ಲಿ ಪ್ಯಾರಾ 5ರಲ್ಲಿ ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"5. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಅಧಿವಿಚಾರಣಾ ನ್ಯಾಯಾಲಯದ ತೀರ್ಪು, ಖುಲಾಸೆಯ ತೀರ್ಪಾಗಿರುವುದರಿಂದ, ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಧೀಶರ ತೀರ್ಪನ್ನು ವ್ಯತಿರಿಕ್ತವಾಗಿದೆಯೆಂಬ ತೀರ್ಮಾನಕ್ಕೆ ಬರದ ಹೊರತು ಪ್ರಾಸಿಕ್ಯೂಷನ್‌ನ ಪರವಾಗಿ ಮಂಡಿಸಿದ ಸಾಕ್ಷ್ಯವನ್ನು*

*ಪುರಸ್ಕರಿಸಿದ ಕಾರಣ ಮಾತ್ರದಿಂದಲೇ ರದ್ದುಪಡಿಸುವಂತಿಲ್ಲವೆಂದು ವಾದಿಸಿರುತ್ತಾರೆ. ನಮ್ಮ ಪ್ರಕಾರ, ದಂಡ ಪ್ರಕ್ರಿಯಾ ಸಂಹಿತೆಯ 417ನೇ ಪ್ರಕರಣದಡಿಯಲ್ಲಿನ ಅಪೀಲಿನಲ್ಲಿ ಅಪೀಲು ನ್ಯಾಯಾಲಯವು, ಅಪೀಲಿನಡಿಯಲ್ಲಿನ ಖುಲಾಸೆ ತೀರ್ಪು ವ್ಯತಿರಿಕ್ತವಾಗಿದೆಯೆಂಬ ತೀರ್ಮಾನಕ್ಕೆ ಬರದ ಹೊರತು ಆದೇಶವನ್ನು ರದ್ದು ಪಡಿಸಲಾಗುವುದಿಲ್ಲವೆಂದು ಹೇಳುವುದು ಸರಿಯಾದುದಾಗಿರುವುದಿಲ್ಲವೆಂದು ವಾದಿಸಲಾಗಿರುತ್ತದೆ.*

*ಅಧಿವಿಚಾರಣಾ ನ್ಯಾಯಾಲಯವು ಆಪಾದಿತನ ಮುಗ್ಧತೆಯನ್ನು ಭಾವಿಸಿಕೊಳ್ಳುವುದು ದುರ್ಬಲವಾಗಿರದೆ, ಯಾರ ಸಾಕ್ಷ್ಯವನ್ನು ಇದರ ಸಮ್ಮುಖದಲ್ಲಿ ದಾಖಲು ಮಾಡಲಾಗಿರುತ್ತದೋ, ಅಂಥ ಸಾಕ್ಷಿಯ ವರ್ತನೆಯನ್ನು ಗಮನಿಸುವ ಅವಕಾಶವಿರುವಂಥ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಖುಲಾಸೆಯ ತೀರ್ಪಿನ ಮೂಲಕ ಸಬಲವನ್ನಾಗಿಸಿಕೊಳ್ಳಲಾಗುತ್ತದೆಂಬ ಸುಸ್ಥಾಪಿತ ನ್ಯಾಯವನ್ನು ಗಮನದಲ್ಲಿಟ್ಟುಕೊಂಡು, ಸಮಗ್ರ ಸಾಕ್ಷ್ಯವನ್ನು ಪುನರವಲೋಕಿಸಲು ಹಾಗೂ ತನ್ನ ಸ್ವಂತ ತೀರ್ಮಾನಕ್ಕೆ ಬರಲು ಖುಲಾಸೆಯ ಆದೇಶದ ವಿರುದ್ಧದ ಅಪೀಲಿನ ಮೇಲೆ ಉಚ್ಚ ನ್ಯಾಯಾಲಯವು ಮುಕ್ತವಾಗಿದೆಯೆಂಬುದನ್ನು ಈ ನ್ಯಾಯಾಲಯವು ನಿರೂಪಿಸಿರುತ್ತದೆ.*

*ಅಲ್ಲದೆ, ಅಪೀಲು ನ್ಯಾಯಾಲಯವು, ಅಪರಾಧ ನಿರ್ಣಯದ ಆದೇಶದ ವಿರುದ್ಧದ ಅಪೀಲಿನ ಸಂದರ್ಭದಲ್ಲಿರುವಂತೆ ಖುಲಾಸೆಯ ಆದೇಶದ ವಿರುದ್ಧದ ಅಪೀಲಿನಲ್ಲಿನ ಸಾಕ್ಷ್ಯವನ್ನು ಪುರಸ್ಕರಿಸುವ ವ್ಯಾಪಕ ಅಧಿಕಾರವಿರುವುದರಿಂದ, ಆಪಾದಿತ ವ್ಯಕ್ತಿಯ ಬಗೆಗೆ ಮುಗ್ಧತೆಯುಳ್ಳವನೆಂಬ ಪೂರ್ವಭಾವನೆ ಹೊಂದಿರುವುದು ಅಧಿವಿಚಾರಣಾ ನ್ಯಾಯಾಲಯದಲ್ಲಿ ಆರಂಭವಾಗಿ ಅಪೀಲಿನ ಹಂತದವರೆಗೆ ಮುಂದುವರೆಯುತ್ತದೆಂಬ ಹಾಗೂ ಅಪೀಲು ನ್ಯಾಯಾಲಯವು, ಖುಲಾಸೆ ಆದೇಶವನ್ನು*

*ದಾಖಲು ಮಾಡುವಂಥ ಅಧಿವಿಚಾರಣಾ ನ್ಯಾಯಾಲಯದ ಅಭಿಪ್ರಾಯಕ್ಕೆ ಮೌಲ್ಯವನ್ನು ಸೇರಿಸಬೇಕೆಂಬ ಅನುವೃದ್ಧಿಗೆ ಒಳಪಟ್ಟಿರುತ್ತದೆಂಬುದು ಇತ್ಯರ್ಥಗೊಂಡಿರುತ್ತದೆ.*

*ಅಪೀಲು ನ್ಯಾಯಾಲಯವು, ಸಾಕ್ಷ್ಯವನ್ನು ಪುನರವಲೋಕಿಸಿ, ಕೆಲವು ತತ್ವಗಳನ್ನು ಗಮನದಲ್ಲಿಟ್ಟುಕೊಂಡು, ವೈರುದ್ಯದ ತೀರ್ಮಾನಕ್ಕೆ ಬಂದಲ್ಲಿ, ತೀರ್ಪನ್ನು ನಿರರ್ಥಕವಾಗಿರುತ್ತದೆಂದು ಹೇಳಲಾಗುವುದಿಲ್ಲ. (ಈ ಸಂಬಂಧದಲ್ಲಿ,* ***ವಕೀಲರ ಪರಿಷತ್ತಿನಲ್ಲಿ*** *ಉದಾಹರಿಸಿರುವ ಹಲವಾರು ಪ್ರಕರಣಗಳು, ಎಂದರೆ,* ***ಸೂರಜ್‌ಪಾಲ್ ಸಿಂಗ್ –ವಿರುದ್ಧ– ರಾಜ್ಯ ಸರ್ಕಾರ 1952 ಸಿಆರ್‌ಡಿಎಲ್‌ಜೆ 331; ಮಿಲಾಯತ್ ಖಾನ್ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ, ಎಐಆರ್ 1953 ಎಸ್‌ಸಿ 122*** *ಗಮನಿಸಬೇಕಾಗಿರುತ್ತದೆ) ನಮ್ಮ ಅಭಿಪ್ರಾಯದಲ್ಲಿ ಉಚ್ಚ ನ್ಯಾಯಾಲಯವು ಇಡೀ ಸಾಕ್ಷ್ಯವನ್ನು ವಿಪರ್ಯಯಗೊಳಿಸಿರುವುದು ಹಾಗು ತನ್ನದೇ ಸ್ವಂತ ತೀರ್ಮಾನಕ್ಕೆ ಬಂದಿರುವುದು ಸಮರ್ಥನೀಯವಾಗಿರುವುದಿಲ್ಲವೆಂದು ಅಪೀಲುದಾರರ ಪರವಾಗಿ ಮಂಡಿಸಿದ ವಾದದಲ್ಲಿ ಯಾವುದೇ ಹುರುಳಿರುವುದಿಲ್ಲ."*

11.4 **ಕೆ. ಗೋಪಾಲ ರೆಡ್ಡಿ** (ಈ ಹಿಂದೆ ಹೇಳಿದ) ಪ್ರಕರಣದಲ್ಲಿ ಈ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವು ಆ ವಾಸ್ತವಿಕ ಸಂದೇಹಗಳಿಗೆ ಅನುವುಮಾಡಿಕೊಟ್ಟಾಗ, ದುರ್ಬಲ ಕಾರಣಗಳಿಗಾಗಿ ನಂಬಲರ್ಹ ಸಾಕ್ಷ್ಯಗಳನ್ನು ತಿರಸ್ಕರಿಸಿದಾಗ, ಹಾಗು ಅಲ್ಪಸಂಭಾವ್ಯತೆಯಿರುವಂಥ ಸಾಕ್ಷ್ಯಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದಾಗ, ನ್ಯಾಯೋದ್ದೇಶ, ನ್ಯಾಯ ನಿರ್ವಹಣೆಯನ್ನು ಅಧೋಗತಿಗಳಿಯದಂತೆ ಮೇಲೆತ್ತಲು ಉಚ್ಚ ನ್ಯಾಯಾಲಯವು ಮಧ್ಯೆಪ್ರವೇಶಿಸುವುದು ಅದರ ಆಧ್ಯಕರ್ತವ್ಯವೇ ಆಗಿರುತ್ತದೆಂದು ಅಭಿಪ್ರಾಯಪಡುತ್ತದೆ.

12. ಮೇಲಿನ ತೀರ್ಪುಗಳನ್ನು ಪರಿಗಣಿಸಿ, ಉಚ್ಚ ನ್ಯಾಯಾಲಯವು, ಖುಲಾಸೆ ಆದೇಶದ ವಿರುದ್ಧದ ಅಪೀಲಿನಲ್ಲಿ, ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ತಲುಪಿದ ನಿರ್ಣಯಗಳನ್ನು

ನಿರ್ದಿಷ್ಟವಾಗಿ ಪರಿಗಣಿಸದೆ ಹಾಗೂ ಕಾರಣಗಳು ವ್ಯತಿರಿಕ್ತವಾಗಿವೆಯೆಂದು ನಿರ್ದಿಷ್ಟವಾಗಿ ಗಮನಿಸದೆ ಖುಲಾಸೆ ಆದೇಶದಲ್ಲಿ ಮಧ್ಯೆಪ್ರವೇಶಿಸಿದ್ದ ಸಂದರ್ಭವಾಗಿದ್ದರೂ ಕೂಡ, ಈ ನ್ಯಾಯಾಲಯಕ್ಕೆ ಸಾಕ್ಷ್ಯಗಳೊಂದಿಗೆ ವ್ಯವಹರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯದ ದೃಷ್ಟಿಕೋನವು ಸ್ಪಷ್ಟವಾಗಿ ಕಾನೂನು ಬಾಹಿರವಾಗಿದೆ ಅಥವಾ ಇದು ತಳೆದ ತೀರ್ಮಾನಗಳು ಪ್ರಾಯೋಗಿಕವಾಗಿ ಸಮರ್ಥನೀಯವಾಗಿರುವುದಿಲ್ಲ ಹಾಗೂ ಅಪೀಲು ನ್ಯಾಯಾಲಯದ ತೀರ್ಪು ಈ ಅಸ್ಥಿರತೆಗಳಿಂದ ಮುಕ್ತವಾಗಿವೆಯೆಂದು ಮನವರಿಕೆಯಾದಲ್ಲಿ ಉಚ್ಚ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯದ ಆದೇಶವನ್ನು ಈ ನ್ಯಾಯಾಲಯವು ಈಗಲೂ ಊರ್ಜಿತಗೊಳಿಸಬಹುದಾಗಿರುತ್ತದೆಂಬುದು ಕಂಡುಬರುತ್ತದೆ. ಅಲ್ಲದೆ, ಉಚ್ಚ ನ್ಯಾಯಾಲಯವು ಇಡೀ ಸಾಕ್ಷ್ಯವನ್ನು ಸ್ವತಂತ್ರವಾಗಿ ಮರು–ವಿಶ್ಲೇಷಿಸಲು ಹಾಗೂ ತನ್ನ ಸ್ವಂತ ನಿರ್ಣಯ ತಳೆಯಲು ಹಕ್ಕುಳ್ಳದ್ದಾಗಿರುತ್ತದೆಂಬುದೂ ಕಂಡುಬರುತ್ತಾದರೂ ಉಚ್ಚ ನ್ಯಾಯಾಲಯವು, ಎರಡು ದೃಷ್ಟಿಕೋನಗಳ ಸಾಧ್ಯತೆಯಿದೆಯೆಂದು ಇಡೀ ಸಾಕ್ಷ್ಯವನ್ನು ಮರು–ವಿಶ್ಲೇಷಿಸುವ ಏಕಮಾತ್ರ ಆಧಾರದ ಮೇಲೆ ಖುಲಾಸೆಯ ಆದೇಶದೊಂದಿಗೆ ಮಧ್ಯೆಪ್ರವೇಶಿಸುವುದು ಸಮರ್ಥನೀಯವಾಗಿರುವುದಿಲ್ಲವೆಂದೂ ಕಂಡುಬರುತ್ತದೆ.

13. ಆಪಾದಿತನನ್ನು ಖುಲಾಸೆಗೊಳಿಸುವಾಗ, ದಾಖಲೆ ಮೇಲಿರುವ ಇಡೀ ಸಾಕ್ಷ್ಯವನ್ನು ಮರು–ವಿಶ್ಲೇಷಣೆಯ ಮೇಲೆ ಹಾಗೂ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳ ಮೇಲೆ, ಅಧಿವಿಚಾರಣಾ ನ್ಯಾಯಾಲಯದ ದೃಷ್ಟಿಕೋನವು ಸ್ಪಷ್ಟವಾಗಿ ದೋಷಪೂರ್ಣವಾಗಿದ್ದು, ಇದು ತಲುಪಿದ ತೀರ್ಮಾನಗಳು ಸಂಪೂರ್ಣವಾಗಿ ಅಸಮರ್ಥನೀಯವಾಗಿರುತ್ತದೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಇದು ಸಾಕ್ಷ್ಯವನ್ನು ಪರೀಕ್ಷಿಸುವಾಗ ಎರಡು ಸೂಕ್ತ ದೃಷ್ಟಿಕೋನಗಳಿರುತ್ತವೆಂಬಂಥ ಪ್ರಕರಣವಾಗಿರುವುದಿಲ್ಲವಾದ್ದರಿಂದ, ಆಪಾದಿತನನ್ನು ಬೆಂಬಲಿಸುವಂಥ ಒಂದು ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಗಣನೆಗೆ ತೆಗೆದುಕೊಂಡ ದೃಷ್ಟಿಕೋನವನ್ನು ಹೆಚ್ಚೆಂದರೆ, ಸೂಕ್ತ ಸಾಕ್ಷ್ಯವನ್ನು ಸೂಕ್ತ ದೃಷ್ಟಿಕೋನದಿಂದ

ನೋಡಿದ್ದಾರೆಂಬುದಕ್ಕೆಂದು ಯುಕ್ತವಾಗಿ ಪರಿಗಣಿಸಿರುತ್ತಾರೆಂದು ಹೇಳಬಹುದಾಗಿರುತ್ತದೆ. ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಈ ಮೇಲೆ ಗಮನಿಸಲಾದಂತೆ, ಮರಣಕಾಲೀನ ಹೇಳಿಕೆಯನ್ನು ಹಾಗೂ ಈ ಮೇಲೆ ಚರ್ಚಿಸಿದಂಥ ಇತರೆ ಮುಖ್ಯ ಸಾಕ್ಷ್ಯಗಳನ್ನು ತ್ಯಜಿಸಿ ಗಂಭೀರ ತಪ್ಪನ್ನು ಎಸಗಿರುತ್ತದೆ. ಆದ್ದರಿಂದ, ಅಪೀಲುದಾರನ ಖುಲಾಸೆಯ ವಿರುದ್ಧದ ಅಪೀಲಿನಲ್ಲಿ ಉಚ್ಚ ನ್ಯಾಯಾಲಯವು ಮಧ್ಯಪ್ರವೇಶಿಸಿ, ಸಾಕ್ಷ್ಯವನ್ನು ಪರಿಗಣಿಸಿ ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಆತನ ಅಪರಾಧ ನಿರ್ಣೀತ ಅಂಶವನ್ನು ದಾಖಲಿಸಿರುವುದು ಸಮರ್ಥನೀಯವಾಗಿರುತ್ತದೆ. ಅಪೀಲಿನಡಿಯಲ್ಲಿನ ತೀರ್ಪು ಯಾವು ಮಧ್ಯಪ್ರವೇಶಿಕೆಯನ್ನು ಬಯಸುವುದಿಲ್ಲ.

14. ಪ್ರಸ್ತುತ, ಅಪೀಲುದಾರ–ಆಪಾದಿತನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಈ ಮೇಲೆ ಉದಾಹರಿಸಿದ ತೀರ್ಪುಗಳ, ಅದರಲ್ಲೂ ನಿರ್ದಿಷ್ಟವಾಗಿ **ಮೊಹಮದ್ ಅಕ್ತರ್** @ **ಕಾರಿ** (ಈ ಹಿಂದೆ ಹೇಳಿದ)ಯ ಪ್ರಕರಣದಲ್ಲಿ ಈ ನ್ಯಾಯಾಲಯದ ಇತ್ತೀಚಿನ ತೀರ್ಪು ಸಂಬಂಧಪಡುವಷ್ಟರ ಮಟ್ಟಿಗೆ, ಪ್ರಪ್ರಥಮವಾಗಿ, ಮೇಲೆ ಹೇಳಿದ ತೀರ್ಪುಗಳಲ್ಲಿ ಈ ನ್ಯಾಯಾಲಯವು ವಿಧಿಸಿದ ಕಾನೂನಿನ ಪ್ರಸ್ತಾವದ ಉಲ್ಲೇಖದೊಂದಿಗೆ ಯಾವುದೇ ವಿವಾದವಾಗಿರುವುದಿಲ್ಲ. ಆದಾಗ್ಯೂ, ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಉದಾಹರಿಸಿದ ಮೇಲೆ ಹೇಳಿದ ಯಾವುದೇ ತೀರ್ಪು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಅನ್ವಯವಾಗಿರುವುದಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಸಾಕ್ಷ್ಯದ ಪರಿಗಣನೆ ಕುರಿತ **ಮೊಹಮದ್ ಅಕ್ತರ್** @ **ಕಾರಿ** (ಈ ಹಿಂದೆ ಹೇಳಿದ) ಪ್ರಕರಣದಲ್ಲಿ ಕೂಡ, ಖುಲಾಸೆಯು ಅಧಿವಿಚಾರಣಾ ನ್ಯಾಯಾಲಯವು ಪರಿಗಣಿಸಿದ ಸಂಭಾವ್ಯ ದೃಷ್ಟಿಕೋನದ ಮೇಲೆ ಸಮರ್ಥನೀಯವಾಗಿದೆಯೆಂಬುದು ಈ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಸಾಕ್ಷ್ಯಗಳನ್ನು ಪುರಸ್ಕರಿಸುವಾಗ, ಉಚ್ಚ ನ್ಯಾಯಾಲಯವು ಮತ್ತೊಂದು ದೃಷ್ಟಿಕೋನದ ಸಾಧ್ಯತೆಯಿರುವುದರಿಂದ ಮಾತ್ರ ಖುಲಾಸೆಯ ತೀರ್ಪನ್ನು ವಿಪರ್ಯಯಗೊಳಿಸುವಂತಿರಲಿಲ್ಲವೆಂಬುದನ್ನು ಈ ನ್ಯಾಯಾಲಯವು

ಗಮನಿಸಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಮೇಲೆ ಗಮನಿಸಲಾದಂತೆ, ದಾಖಲೆ ಮೇಲಿನ ಇಡೀ ಸಾಕ್ಷ್ಯವನ್ನು ಮರು–ವಿಶ್ಲೇಷಣೆ ಕುರಿತಂತೆ, ಎರಡು ಸೂಕ್ತ ಸಂಭಾವ್ಯತೆಯಿರುವಡೆ, ಆಪಾದಿತನನ್ನು ಬೆಂಬಲಿಸುವಂಥ ಒಂದು ಸಾಧ್ಯತೆಯನ್ನು ಅನ್ವಯಿಸಿಕೊಳ್ಳಬೇಕೆಂಬ ಪ್ರಕರಣವು ಇದಾಗಿರುವುದಿಲ್ಲ. ಮೇಲೆ ಗಮನಿಸಿದಂತೆ, ಆಪಾದಿತನನ್ನು ಖುಲಾಸೆಗೊಳಿಸುವುದು ವ್ಯತಿರಿಕ್ತವಾದಾಗ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ದಾಖಲುಮಾಡಿದ ನಿರ್ಣಯಗಳು ಹಾಗು ಅಧಿವಿಚಾರಣಾ ನ್ಯಾಯಾಲಯದ ದೃಷ್ಟಿಕೋನ ಸ್ಪಷ್ಟವಾಗಿ ದೋಷಪೂರ್ಣವಾಗಿದ್ದು, ಇದು ತಳೆದ ತೀರ್ಮಾನಗಳು ಸಂಪೂರ್ಣವಾಗಿ ಅಸಮರ್ಥನೀಯವಾಗಿರುತ್ತದೆ. ಆದ್ದರಿಂದ, **ಸಾಂಬಸಿವನ್ (ಈ ಹಿಂದೆ ಹೇಳಿದ); ಉಮೋದಾಬಾಲು ಜಾದವಬಾಯಿ (ಈ ಹಿಂದೆ ಹೇಳಿದ) ಹಾಗೂ ಅಟ್ಲೈ (ಈ ಹಿಂದೆ ಹೇಳಿದ)** ಪ್ರಕರಣಗಳಲ್ಲಿ ಈ ನ್ಯಾಯಾಲಯವು ನೀಡಿದ ಮೇಲಿನ ತೀರ್ಮಾನಗಳನ್ನು ಪರಿಗಣಿಸಿ, ಉಚ್ಚ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಅಪರಾಧ ನಿರ್ಣಯದ ತೀರ್ಪು ಹಾಗೂ ಆದೇಶದಲ್ಲಿ ಈ ನ್ಯಾಯಾಲಯವು ಮಧ್ಯೆಪ್ರವೇಶಿಸಬೇಕಾದ ಅವಶ್ಯಕತೆಯಿರುವುದಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಅಪೀಲಿನಡಿಯಲ್ಲಿನ ತೀರ್ಪು ಹಾಗೂ ಆದೇಶದಲ್ಲಿ ಯಾವುದೇ ರೀತಿಯ ಮಧ್ಯೆಪ್ರವೇಶಿಕೆಯು ಸಮರ್ಥನೀಯವಾಗಿರುವುದಿಲ್ಲ. ಹಾಗಾಗಿ, ಈ ಅಪೀಲಿನಲ್ಲಿ ಯಾವುದೇ ಹುರುಳಿರುವುದಿಲ್ಲವಾದ್ದರಿಂದ ಇದು ವಜಾಗೊಳ್ಳಬೇಕಾದಂತಯೇ ಇದ್ದು, ತದನುಸಾರವಾಗಿ ವಜಾಗೊಳಿಸಲಾಗಿರುತ್ತದೆ.

**ನವ ದೆಹಲಿ,** **(… ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್)**

**ಏಪ್ರಿಲ್ 10, 2019.** **(..ನ್ಯಾಯಮೂರ್ತಿ ಎಂ.ಆರ್. ಷಾ)**

## ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ" ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."